# ನಮ್ಮ ಮಾನಸ

ಸಂಪುಟ : 1 ನವೆಂಬರ್ 2007 ಸಂಚಿಕೆ : 7



# ನಮ್ಮ ಮಾನಸ

**ನವೆಂಬರ್ 2007**

ಸಂಪುಟ : 1    ಸಂಚಿಕೆ : 7

*Editor, Printer and Publisher*
***Rajeshwari H.S.,***
*No. 114/5, 9th Cross, 2nd Main*
*Chamarajpet, Bangalore - 560 018.*
*Mobile : 9449345698*

*Printed at*
***ILA Mudrana***
*No. 36, 40 Ft. Road,*
*Raghavanagara*
*New Timberyard Layout*
*Bangalore - 560 026.*
*© : 26757159 / 32715773*




•

*ಚಂದಾ ವಿವರ*

| | |
|---|---|
| ಬಿಡಿಪ್ರತಿ | 8–00 ರೂ. |
| ವಾರ್ಷಿಕ ಚಂದಾ (ವಿಶೇಷ ಸಂಚಿಕೆಯೊಂದಿಗೆ) | 100–00 ರೂ. |
| ಸಂಸ್ಥೆಗಳಿಗೆ | 150–00 ರೂ. |

## ಪರಿವಿಡಿ






# ನಮ್ಮ ಮಾನಸ

114/5, 9ನೇ ತಿರುವು, 2ನೇ ಮುಖ್ಯರಸ್ತೆ, ಚಾಮರಾಜಪೇಟೆ, ಬೆಂಗಳೂರು – 560 018

*ಚಂದಾಹಣವನ್ನು ಈ ವಿಳಾಸಕ್ಕೆ ಚೆಕ್ ಅಥವಾ ಡಿ.ಡಿ. ಮೂಲಕ ಕಳಿಸಬಹುದು*

– – –

**ಮೈಸೂರಿನಲ್ಲಿ ಓದುಗರು ಪ್ರತಿಗಳಿಗೆ ಹಾಗೂ ಚಂದಾ ನವೀಕರಣಕ್ಕೆ ಸಂಪರ್ಕಿಸಿ**

ವೆಂ. ವನಜ

*2329, 12ನೇ ಮೈನ್, 2ನೇ ಹಂತ, ವಿಜಯನಗರ*
*ಮೈಸೂರು – 570 017*

ಸಂಪಾದಕೀಯ

# ವಿವಾಹ ನೋಂದಣಿ ಕಡ್ಡಾಯಕ್ಕೆ ಹಸ್ತಕ್ಷೇಪ ಸಲ್ಲದು

ಮದುವೆಯ ನೋಂದಣಿಯನ್ನು ಕಡ್ಡಾಯವಾಗಿ ಮಾಡಬೇಕೆಂದು ಹಾಗೂ ಇದಕ್ಕೆ ಸಂಬಂಧ ಪಟ್ಟಂತೆ ಪ್ರತಿಯೊಂದು ರಾಜ್ಯವು ನಿಯಮಗಳನ್ನು ರೂಪಿಸಬೇಕೆಂದು ಇತ್ತೀಚೆಗೆ ಸರ್ವೋಚ್ಚ ನ್ಯಾಯಾಲಯ ಆದೇಶ ನೀಡಿದೆ. ಮದುವೆಯ ನೋಂದಣಿಯನ್ನು ಕಡ್ಡಾಯ ಮಾಡುವುದರ ಬಗ್ಗೆ ವಾದ-ವಿವಾದಗಳು, ಭಿನ್ನಾಭಿಪ್ರಾಯಗಳು ಬೇರೆ ಬೇರೆ ಧರ್ಮವನ್ನು ಅನುಸರಿಸುವ ಜನರಿಂದ ಮೂಡಿಬರುತ್ತಿವೆ.

ಸಮಾಜದಲ್ಲಿ 'ವಿವಾಹ'ವನ್ನು ಧರ್ಮದ ಹಿನ್ನೆಲೆಯಲ್ಲಿಯೇ ವ್ಯಾಖ್ಯಾನಿಸಲಾಗುತ್ತದೆ. ಹಿಂದೂ ಧರ್ಮ ಹಾಗೂ ಕ್ರಿಶ್ಚಿಯನ್ ಧರ್ಮ ವಿವಾಹವನ್ನು ಧಾರ್ಮಿಕ ಹಿನ್ನೆಲೆಯಲ್ಲಿ ನೋಡಿದರೆ, ಇಸ್ಲಾಂ ಸಹ ಧಾರ್ಮಿಕ ಹಿನ್ನೆಲೆಯಲ್ಲಿಯೇ ವ್ಯಾಖ್ಯಾನಿಸಿದರೂ ಅದು ಇಬ್ಬರು ವ್ಯಕ್ತಿಗಳ ನಡುವಿನ ಒಪ್ಪಂದವೆಂದು ಪರಿಗಣಿಸುತ್ತದೆ.

ಆದರೆ ವಿವಾಹ, ಕುಟುಂಬಕ್ಕೆ ಸಂಬಂಧ ಪಟ್ಟ ವಿಚಾಗಳು, ಪದ್ಧತಿಗಳು ಧಾರ್ಮಿಕ ಪ್ರೇರಣೆಯೊಂದಿಗೆ ಪುರುಷಪ್ರಧಾನ ಸಂಸ್ಕೃತಿಯೊಂದಿಗೆ ತಳುಕು ಹಾಕಿಕೊಂಡಿರುವುದನ್ನು ನಾವು ಕಾಣಬಹುದು. ಇವು ಪುರುಷರ ಹಿತಾಸಕ್ತಿಯನ್ನು ರಕ್ಷಿಸುವುದರೊಂದಿಗೆ ಮಹಿಳೆಯರ ಹಕ್ಕು ಬಾಧ್ಯತೆಗಳನ್ನು ತುಳಿಯುತ್ತವೆ. ಮಹಿಳೆಯರ ಮೂಲಭೂತ ಹಕ್ಕುಗಳನ್ನು ಕಿತ್ತುಕೊಳ್ಳುತ್ತಿವೆ. ಬದಲಾಗುತ್ತಿರುವ ಆರ್ಥಿಕ ಸಾಮಾಜಿಕ ಪರಿಸ್ಥಿತಿಯೊಂದಿಗೆ ಹೆಚ್ಚುತ್ತಿರುವ ಸರಕು ಸಂಸ್ಕೃತಿ, ಉಪಭೋಗ ಧೋರಣೆಗಳು ಕುಟುಂಬದಲ್ಲಿ ಮಹಿಳೆಯ ಸ್ಥಾನಮಾನದ ಮೇಲೆ ತೀವ್ರ ಸ್ವರೂಪದ ಪರಿಣಾಮವನ್ನು ಬೀರುತ್ತಿವೆ. ಮಹಿಳೆಗೆ ರಕ್ಷಣೆ, ಭದ್ರತೆಯನ್ನು ನೀಡಬೇಕಾದ ವಿವಾಹ, ಕುಟುಬದಂತಹ ಸಂಸ್ಥೆಗಳು ಆಕೆಯ ಶೋಷಣೆಯ ಗೂಡಾಗುತ್ತಿವೆ. ಮಹಿಳೆಯರು ಇದು ತಮ್ಮ 'ಕರ್ಮ' 'ಹಣೆಬರಹ'ವೆಂದು ನರಳುತ್ತಾರೆ. ಬದುಕುವುದು, ಇಲ್ಲವೆ ಕ್ರೌರ್ಯಕ್ಕೆ ಬಲಿಪಶುವಾಗುವುದು ಸರ್ವೇ ಸಾಮಾನ್ಯವಾಗಿದೆ. ದಿನಪತ್ರಿಕೆಗಳಲ್ಲಿ ಇಂತಹ ಘಟನೆಗಳು ವರದಿಯಾದಾಗ ಒಂದು ಕ್ಷಣ 'ಅಯ್ಯೋ' ಎಂದು ಮರೆತು ಬಿಡುವಷ್ಟು ಸಹಜಸ್ಥಿತಿ, ಧೋರಣೆ ಕಂಡುಬರುತ್ತದೆ. ರಾಷ್ಟ್ರೀಯ ಮಹಿಳಾ ಆಯೋಗ ಮದುವೆಯ ನೋಂದಣಿಯನ್ನು ಕಡ್ಡಾಯ ಮಾಡಬೇಕೆಂಬ ಬೇಡಿಕೆಯನ್ನು ಇಟ್ಟಿತ್ತು, ಮತ್ತು ಇದನ್ನು ಕಡ್ಡಾಯವಾಗಿ ಜಾರಿಗೆ ತರುವಂತೆ ಸರ್ಕಾರಗಳಿಗೆ ಆದೇಶ ನೀಡಬೇಕೆಂದು ಸರ್ವೋಚ್ಚ ನ್ಯಾಯಾಲಯದ ಮೆಟ್ಟಿಲನ್ನು ಏರಿತ್ತು. ಮದುವೆಯ ನೋಂದಣಿಯನ್ನು ಕಡ್ಡಾಯ ಗೊಳಿಸುವಂತೆ ಹಾಗೂ ನಿಯಮಗಳನ್ನು ರೂಪಿಸುವಂತೆ ಒಂದು ವರ್ಷದ ಹಿಂದೆಯೇ ತೀರ್ಪು ಬಂದಿದ್ದರೂ, ಈ ಆದೇಶವನ್ನು ಬಹುಪಾಲು ರಾಜ್ಯ ಸರ್ಕಾರಗಳು ಗಂಭೀರವಾಗಿ ಪರಿಗಣಿಸಿರಲಿಲ್ಲ. ಕೇವಲ ಪಶ್ಚಿಮ ಬಂಗಾಳ ಹಾಗೂ ಒರಿಸ್ಸಾ ರಾಜ್ಯಗಳು ಮಾತ್ರ ಈ ಆದೇಶವನ್ನು ಪಾಲಿಸಿದ್ದವು.

ಹಲವಾರು ರಾಜ್ಯಗಳಲ್ಲಿ ಮದುವೆಯ ನೋಂದಣಿಯ ಬಗ್ಗೆ ಕಾನೂನಿದ್ದರೂ, ಅದು ಕೇವಲ ಕೆಲವು ಸಮುದಾಯಗಳಿಗೆ ಮಾತ್ರ ಅನ್ವಯವಾಗುತ್ತಿದೆ. ಮುಸ್ಲಿಂ ಹಾಗೂ ಕ್ರೈಸ್ತ ಸಮುದಾಯಗಳಿಗೆ ಇದು ಅನ್ವಯವಾಗುವುದಿಲ್ಲ. ಹಿಂದೂ ಸಮುದಾಯದಲ್ಲಿ ಇದು ಆಯ್ಕೆಗೆ ಬಿಟ್ಟಿದ್ದು. ಕ್ರೈಸ್ತ ಸಮುದಾಯದವರು ಚರ್ಚಿನಲ್ಲಿ ಮಾತ್ರ ನೋಂದಣಿ ಮಾಡಿಸುತ್ತಾರೆ. ಮದುವೆಯ ನೋಂದಣಿಯನ್ನು ಕಡ್ಡಾಯ ಮಾಡುವುದು ಮಹಿಳೆಯರ ಹಿತಾಸಕ್ತಿಯನ್ನು ಕಾಪಾಡುವ ದೃಷ್ಟಿಯಿಂದ ದಿಟ್ಟವಾದ ಹೆಜ್ಜೆ. ಆದರೆ ಮದುವೆಯ ನೋಂದಣಿಯನ್ನು ಕಡ್ಡಾಯ ಮಾಡುವುದರಲ್ಲಿ ರಾಜಕೀಯ ಪಕ್ಷಗಳ ಇಚ್ಛಾಶಕ್ತಿಯ ಕೊರತೆಯನ್ನು ಕಾಣಬಹುದು. ಇದು ಸಮುದಾಯಗಳನ್ನು ಮತ ಬ್ಯಾಂಕನ್ನಾಗಿ ನೋಡುವುದರಿಂದ ಈ ಇಕ್ಕಟ್ಟಿನ ಸ್ಥಿತಿ ಉಂಟಾಗಿದೆ.

ಮದುವೆ ನೋಂದಣಿಯನ್ನು ಕಡ್ಡಾಯವಾಗಿ ಮಾಡುವುದರಿಂದ ಎಲ್ಲಾ ಸಮುದಾಯದ ಮಹಿಳೆಯರಿಗೆ ಅಗತ್ಯವಾದ ರಕ್ಷಣೆ ದೊರೆಯುತ್ತದೆ. ಮೊದಲ ವಿವಾಹವನ್ನು ರದ್ದುಗೊಳಿಸದೇ ಎರಡನೆಯದೊ, ಮೂರನೆಯದೊ ವಿವಾಹವಾಗುವುದು, ಮದುವೆಯೇ ಆಗಿಲ್ಲವೆಂದು ಸುಳ್ಳು ಹೇಳಿ ಬೇರೆ ಮದುವೆಯಾಗುವುದು, ಕ್ಷುಲ್ಲಕ ಕಾರಣಗಳಿಗೆ ಹೆಂಡತಿಯನ್ನು ಬಿಡುವುದು ಸಾಮಾನ್ಯ ಘಟನೆಗಳಾಗಿವೆ. ಸರಿಯಾದ ದಾಖಲೆಗಳಿಲ್ಲದ್ದರಿಂದ ಎರಡನೇ ಹೆಂಡತಿಯನ್ನೆ ಮೊದಲ ಹೆಂಡತಿಯೆಂದು ನ್ಯಾಯಾಲಯದಲ್ಲಿ ಸಾಬೀತು ಪಡಿಸಿ ಜಯಗಳಿಸಿದ ನಿದರ್ಶನಗಳೂ ಇವೆ. ದೌರ್ಜನ್ಯಕ್ಕೆ ಒಳಗಾದ ಮಹಿಳೆಯರು ಸಂಕಷ್ಟ ಸ್ಥಿತಿಯಲ್ಲಿ ಮನೆಯಿಂದ ಹೊರಬರುವಾಗ ಮದುವೆಯ ಆಹ್ವಾನ ಪತ್ರ, ಫೋಟೋದಂತಹ ದಾಖಲೆಗಳನ್ನು ತಮ್ಮೊಂದಿಗೆ

ಹೊರತರಲು ಸಾಧ್ಯವೆ? ಎಷ್ಟೋ ಮಹಿಳೆಯರು ತಮ್ಮ ಅಂಕಪಟ್ಟಿ ಅಥವಾ ಇತರ ದಾಖಲೆಗಳನ್ನು ಸಹ ಮನೆಯಿಂದ ತರಲಾರದೆ ಕೆಲಸಕ್ಕೆ ಹೋಗುವ ಅವಕಾಶದಿಂದ ವಂಚಿತರಾಗಿರುವುದುಂಟು.

ವಿಚ್ಛೇದಿತ ಮಹಿಳೆಯರ ರಕ್ಷಣೆ, ಬಹುಪತ್ನಿತ್ವ ಹಾಗೂ ಬಾಲ್ಯ ವಿವಾಹವನ್ನು ತಡೆಯಲು ಕಡ್ಡಾಯ ನೋಂದಣಿ ನೆರವಾಗುತ್ತದೆ. ಹೆಚ್.ಐ.ವಿ. ಹಾಗೂ ಏಡ್ಸ್ ಪ್ರಕರಣಗಳಲ್ಲಿ ಸಂಪೂರ್ಣವಾಗಿ ಬಲಿಪಶುಗಳಾಗುತ್ತಿರುವ ಮಹಿಳೆಯರು ಮತ್ತು ಖಾಲಿ ಕಾಗದದ ಮೇಲೆ ಸಹಿ ಮಾಡುವಂತೆ ದೈಹಿಕವಾಗಿ ಹಲ್ಲೆ ನಡೆಸುವುದು ಇವುಗಳನ್ನೆಲ್ಲಾ ತಹಬಂದಿಗೆ ತರಲು ಈ ನಿಯಮದಿಂದ ಸಾಧ್ಯವಾಗಬಹುದು.

ಮದುವೆಯ ಕಡ್ಡಾಯ ನೋಂದಣಿಯು ಮಹಿಳೆಗೆ ಅಗತ್ಯವಾದ ರಕ್ಷಣೆಯನ್ನು ಪಡೆಯುವ ಪ್ರಕ್ರಿಯೆಗೆ ನೆರವಾಗುತ್ತದೆ. ಇದನ್ನು ವೈಯಕ್ತಿಕ ಕಾನೂನು ಅಥವಾ ಇನ್ನಾವುದೇ ನೆಪದಿಂದ ವಿರೋಧಿಸುವುದು ಸಲ್ಲದು. ಈ ಬದಲಾವಣೆಯನ್ನು ಯಾವುದೇ ಧರ್ಮದಲ್ಲಿ ಹಸ್ತಕ್ಷೇಪವೆಂದು ಸಹ ಭಾವಿಸಬಾರದು. ಮಹಿಳೆಯರ ಸಮಸ್ಯೆಯನ್ನು ಒಂದು ಸಮುದಾಯದ 'ಗೌರವ' 'ಘನತೆ'ಯನ್ನು ಕಾಪಾಡುವ ಪ್ರಶ್ನೆಯೊಂದಿಗೆ ತಳುಕು ಹಾಕುವುದನ್ನು ನಿಲ್ಲಿಸುವುದು ಆರೋಗ್ಯಕರ ಸಮಾಜ ನಿರ್ಮಾಣದ ಹಿತದೃಷ್ಟಿಯಿಂದ ಸೂಕ್ತವಾದುದು. ಆಕೆಯ 'ವ್ಯಕ್ತಿತ್ವ'ಕ್ಕೆ ಬೆಲೆ, ಗೌರವ ನೀಡಿದರೆ ಆಕೆಗೆ ಬದುಕುವ ಹಕ್ಕನ್ನು ನೀಡಿದಂತೆ.

ಯಾವ ವಿಧಿಯಾಚರಣೆ, ನೋಂದಣಿ ಇಲ್ಲದೆಯೂ ಸಂಸಾರ ಮಾಡುವವರು ಹಲವರಿದ್ದಾರೆ. ಒಟ್ಟಿಗೆ ಬದುಕುವುದು ಪರಸ್ಪರ ನಂಬಿಕೆಯನ್ನು ಆಧರಿಸಿದೆ ಎಂದು ನಂಬುವವರು ಸಾಮಾನ್ಯವಾಗಿ ಕಡ್ಡಾಯ, ಪರಿಧಿಯೊಳಗಿನ ಬದುಕನ್ನು ನಿರಾಕರಿಸುತ್ತಾರೆ. ಅವರು ಒಂದು ಬಗೆಯ ಅರಾಜಕ ಸ್ಥಿತಿ (ಅನಾರ್ಕಿ)ಯನ್ನು ಇಷ್ಟಪಡುವುದು ಸಹಜ. ಈ ದಿನಗಳಲ್ಲಿ ಮನುಷ್ಯರಲ್ಲಿ ನಂಬಿಕೆ ಕಳೆದು ಹೋಗುತ್ತಿದೆ. 'ರಾಜನ ಭಯಕ್ಕಿಂತ ರಾಜನಿಲ್ಲದ ರಾಜ್ಯದಲ್ಲಿ ಭಯ ಹೆಚ್ಚು' ಎಂಬ ಮಾತು ಇಂಥ ಸಂದರ್ಭಗಳಿಗೆ ಅನ್ವಯವಾಗುತ್ತದೆ! ತಪ್ಪು ಮಾಡುವುದೇ ಗುರಿಯಾದವರು ಕಾನೂನನ್ನು ಮೀರುತ್ತಾರೆ, ನಿಜ. ಆದರೆ ಅದು ತುಂಬ ಸುಲಭವಲ್ಲ ಎಂಬುದು ಅವರನ್ನು ತುಸು ಹಿಮ್ಮೆಟ್ಟಿಸುತ್ತದೆಯಲ್ಲವೆ? ಆ ದೃಷ್ಟಿಯಿಂದಲೂ ಇಂಥ ಕಡ್ಡಾಯಗಳು ಒಂದು ಪ್ರಯೋಗವಾಗಿ ಸ್ವಾಗತಾರ್ಹ.

ಮಹಿಳೆಯರು ಈ ನಿಟ್ಟಿನಲ್ಲಿ ಜಾಗೃತರಾಗಬೇಕಾಗುತ್ತದೆ. ಮಹಿಳಾ ಸಂಘಟನೆಗಳು, ಸ್ವಯಂ ಸೇವಾ ಸಂಸ್ಥೆಗಳು ಕಾರ್ಯಶೀಲರಾಗಿ ಕಾರ್ಯಪ್ರವೃತ್ತರಾದರೆ ಮಾತ್ರ ಮಹಿಳೆಯರ ಹಕ್ಕು ಬಾಧ್ಯತೆಗಳ ರಕ್ಷಣೆಯಲ್ಲಿ ಮದುವೆ ನೋಂದಣಿ ಕಡ್ಡಾಯ ನಿಯಮವನ್ನು ಬಳಸಿಕೊಳ್ಳಬಹುದು.

* * *

ರಂಗಭೂಮಿ, ಚಲನಚಿತ್ರ ಕ್ಷೇತ್ರಗಳಿಗೆ ಅನುಪಮ ಕೊಡುಗೆಯನ್ನು ಕೊಟ್ಟ ಪ್ರೇಮಾಕಾರಂತರು ವಿಧಿವಶರಾದರು. ಪ್ರೇಮಾಕಾರಂತರು ವಿಶಿಷ್ಟ, ದಿಟ್ಟ ಮಹಿಳೆಯಾಗಿದ್ದರು. ಸಾಮಾನ್ಯವಾಗಿ ಮಹಿಳೆಯರು ಆಸಕ್ತಿವಹಿಸದ ಕ್ಷೇತ್ರಗಳಲ್ಲಿ ಶ್ರಮಿಸಿ, ಯಶಸ್ವಿಯಾಗಿ ಇನ್ನಿತರರಿಗೆ ಮಾರ್ಗದರ್ಶಕರಾದರು. ವಸ್ತ್ರವಿನ್ಯಾಸ, ನಿರ್ದೇಶನ, ಅಭಿನಯ, ಬರವಣಿಗೆಯೇ ಮೊದಲಾದ ಹಲವು ವಿಭಾಗಗಳಲ್ಲಿ ದುಡಿದರು. ಎಂ.ಕೆ. ಇಂದಿರಾ ಅವರ "ಫಣಿಯಮ್ಮ"ನನ್ನು ಚಲನಚಿತ್ರದಲ್ಲಿ ಚಿರಸ್ಥಾಯಿಯಾಗಿಸಿ ಪ್ರಪಂಚದಾದ್ಯಂತ ತೋರಿದರು. ಮಕ್ಕಳ ರಂಗಭೂಮಿಗೆ ಅವರ ಕೊಡುಗೆ ಅಪಾರ. ಹಲವು ರಾಜ್ಯ, ರಾಷ್ಟ್ರ ಪ್ರಶಸ್ತಿಗಳನ್ನು ಪಡೆದಿದ್ದರು. ಪ್ರೇಮಾ ಕಾರಂತರು ಬಿ.ವಿ.ಕಾರಂತರ ನೆನಪಿನಲ್ಲಿ ಬಾಬುಕೋಡಿ ಪ್ರತಿಷ್ಠಾನ ಸ್ಥಾಪಿಸಿ ವಿಶೇಷ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ತಮ್ಮ ಎಪ್ಪತ್ತೈದನೆಯ ವಯಸ್ಸಿನಲ್ಲಿ ನಿರ್ಗಮಿಸಿದ್ದಾರೆ. ಮಹಿಳಾಲೋಕ ಸ್ವತಂತ್ರ ಅನಿಸಿಕೆಯ, ಸ್ವಾಭಿಮಾನಿ ಹೆಣ್ಣೊಂದನ್ನು ಕಳೆದುಕೊಂಡಿತು. ಮಾನಸ ಬಳಗ ಪ್ರೇಮಾ ಕಾರಂತರ ಆತ್ಮಕ್ಕೆ ಶಾಂತಿಯನ್ನು ಕೋರುತ್ತದೆ.

* * *

'ಬಿತ್ತಾಕಿಗೇ ಗೊತ್ತು ಬೀಜದ ಗುಟ್ಟು' ನಮ್ಮ ಪತ್ರಿಕೆಯಲ್ಲಿ ನಾಲ್ಕು ಕಂತಿನಲ್ಲಿ ಪ್ರಕಟವಾದ ವಿಶೇಷ ಲೇಖನ. ಲೇಖನವು ಸಾಹಿತ್ಯ–ಸಾಂಸ್ಕೃತಿಕ ವಲಯದ ಎಲ್ಲರ ಗಮನವನ್ನೂ ಸೆಳೆದಿದೆ. ಇಂಥದೊಂದು ಲೇಖನವನ್ನು ಒದಗಿಸಿದ ವಿ. ಗಾಯತ್ರಿ ಅವರಿಗೆ ಹಾಗೂ ಪ್ರಕಟಿಸಲು ಅನುಮತಿ ಕೊಟ್ಟ ಇಕ್ರಾ ಸಂಸ್ಥೆಗೆ 'ನಮ್ಮ ಮಾನಸ'ದ ಕೃತಜ್ಞತೆಗಳು. ಕಳೆದ ಸಂಚಿಕೆಯಲ್ಲಿ ಪ್ರಾರಂಭವಾದ ಸ್ತ್ರೀಯರ ಬರಹದಲ್ಲಿ 'ಮಾದರಿ'ಗಳ ಸೃಷ್ಟಿ ಕುರಿತ ಜಿಜ್ಞಾಸೆಗೆ ಅನೇಕ ಪ್ರತಿಕ್ರಿಯೆಗಳು ಬಂದಿವೆ. ಈ ಸಂಚಿಕೆಯಲ್ಲಿ ಕೆಲವು ಬರಹಗಳನ್ನು ಪ್ರಕಟಿಸಲಾಗಿದೆ. ಸಂವಾದ ಮುಂದುವರಿಯುತ್ತದೆ. ಆರೋಗ್ಯಕವಾಗಿ ಪ್ರತಿಕ್ರಿಯಿಸಿದ ಎಲ್ಲರಿಗೂ ಕೃತಜ್ಞರಾಗಿದ್ದೇವೆ.

ಪುಟ ಮಿತಿಯ ಕಾರಣದಿಂದಾಗಿ ಕೆಲವು ಲೇಖನಗಳು (ನೀವೂ ಓದಿ, ಕಲಾವಿದೆಯರ ಪ್ರಯೋಗಗಳು ಇತ್ಯಾದಿ) ಈ ಸಂಚಿಕೆಯಲ್ಲಿ ಪ್ರಕಟವಾಗಿಲ್ಲ. ದಯಮಾಡಿ ಸಹಕರಿಸಿರಿ.

■

# ಆರೋಗ್ಯ : ನಾಚುವಂತಹ ಪರಿಸ್ಥಿತಿಯಲ್ಲಿ ಸ್ವತಂತ್ರ ಭಾರತ

● *ಡಾ|| ಎಚ್. ಗಿರಿಜಮ್ಮ*

ಇತ್ತೀಚಿನ ದಿನಗಳಲ್ಲಿ ನಾಗರಿಕರೂ ನಾಚುವಂತಹ ಎರಡು ಘಟನೆಗಳು ನಡೆದವು.

ಅದರಲ್ಲಿ ಬೆಂಗಳೂರು ನಗರಕ್ಕೆ ಸಂಬಂಧಪಟ್ಟ ಕೆ.ಆರ್. ಪುರಂ ಆರೋಗ್ಯಕೇಂದ್ರದಲ್ಲಿ ತುಂಬು ಗರ್ಭಿಣಿಯೊಬ್ಬಳಿಗೆ ಆದ ದುರಂತವೂ ಒಂದು. ಪ್ರತಿ ತಿಂಗಳೂ ಪ್ರಸವಪೂರ್ವ ಚಿಕಿತ್ಸೆಗೆಂದು ಹೋಗಿ ಬರುತ್ತಿದ್ದ ಮಹಿಳೆಯರಿಗೆ ಕೆಲವರು ದಿನಾಂಕ ನೆನಪಿಟ್ಟುಕೊಂಡು ತಿಳಿಸಿದರೆ ಇಂತಹ ತಿಂಗಳಲ್ಲಿ ಎರಡು ದಿನ ಹಿಂದೆ-ಮುಂದೆ ಹೆರಿಗೆಯಾಗ ಬಹುದೆಂದು ಯಾವುದೇ ವೈದ್ಯರಾದರೂ ಹೇಳುತ್ತಾರೆ. ದಾದಿಯರೂ ಲೆಕ್ಕಹಾಕಿ ಹೇಳಬಹುದು. ಅಂತಹುದರಲ್ಲಿ ಅಂದು ಮಹಿಳೆಯು ಪ್ರಸವ ವೇದನೆಯಿಂದ ಅಲ್ಲಿಗೆ ಹೋದಾಗ ಕೆಲವು ಗಂಟೆಗಳ ಕಾಲ ಆಸ್ಪತ್ರೆಯಲ್ಲಿಟ್ಟುಕೊಂಡು-ವೈದ್ಯರು ಇಲ್ಲದ ಕಾರಣ-ಅಲ್ಲಿನ ನರ್ಸ್‌ಗಳೇ ಹೆರಿಗೆಗೆ ಪ್ರಯತ್ನಿಸಿ, ಸಾಧ್ಯವಾಗದ್ದರಿಂದ ಆಕೆಯನ್ನು ಹಲಸೂರು ಆರೋಗ್ಯ ಕೇಂದ್ರಕ್ಕೆ ರವಾನಿಸಿ ಬಿಟ್ಟರು. ಅಲ್ಲಿಯವರೂ ಆ ಮಹಿಳೆಯನ್ನು ಒಳಗೆ ಕರೆದು ಪರೀಕ್ಷಿಸಿ ನೋಡುವ ಸಹನೆಯೂ ಇಲ್ಲದೇ ಆಕೆಯಿಂದ 1000 ರೂ ಗಳನ್ನು ತೆಗೆದುಕೊಂಡು ಆಸ್ಪತ್ರೆಯ ಆ್ಯಂಬುಲೆನ್ಸ್‌ನಲ್ಲಿ ವಾಣಿವಿಲಾಸ ಆಸ್ಪತ್ರೆಗೆ ಸಾಗಿಸಿ ಬಿಟ್ಟರು. ಈ ಅವಾಂತರಗಳಿಂದಾಗಿ ಆ್ಯಂಬುಲೆನ್ಸ್‌ನಲ್ಲಿಯೇ ಆ ಮಹಿಳೆಯ ಹೆರಿಗೆಯಾಗಿ ಹೋಯಿತು. ಸೂಕ್ತ ಚಿಕಿತ್ಸೆ, ರಕ್ಷಣೆಯಿಲ್ಲದ್ದರಿಂದ ಮಗು ಮೃತಪಟ್ಟಿತು. ಮಹಿಳೆ ತಾಯಿಮಾಸು ಬಿದ್ದನಂತರದ ರಕ್ತಸ್ರಾವದಿಂದ ನಿತ್ರಾಣವಾಗಿ ಪ್ರಜ್ಞೆ ಕಳೆದುಕೊಂಡಳು. ವಾಣಿವಿಲಾಸ ಆಸ್ಪತ್ರೆಯಲ್ಲೂ ಕೂಡಾ ತುರ್ತಾಗಿ ಚಿಕಿತ್ಸೆ ದೊರೆಯಲಿಲ್ಲ. ಸತ್ತು ಹೋಗಿರುವುದರಿಂದ, ಈ ಆಸ್ಪತ್ರೆಗೆ ಸಂಬಂಧಪಟ್ಟಿಲ್ಲವೆಂದು ನವಜಾತ ಶಿಶುವಿನ ಶವವನ್ನೂ ಮುಟ್ಟಲಿಲ್ಲ. ವಾದ ವಿವಾದಗಳ ಅನಂತರ ಬಾಣಂತಿಯನ್ನು ವಾರ್ಡಿಗೆ ದಾಖಲಿಸಿ ಕೊಂಡರು. ಇದು ಸ್ವಾತಂತ್ರ್ಯ ಬಂದು 60 ವರ್ಷಗಳ ನಂತರವೂ ನಡೆದದ್ದು!

2000 ದ ಹೊತ್ತಿಗೆ ಎಲ್ಲರಿಗೂ ಆರೋಗ್ಯ ಎಂದು ಘಂಟಾಘೋಷ ವಾಗಿ ಹೇಳುತ್ತಿದ್ದ ಸರ್ಕಾರಕ್ಕೆ 2007ರಲ್ಲೂ ಈ ತರಹದ ದುರಂತ ಘಟನೆಗಳು ನಡೆಯುತ್ತಿವೆ ಎಂದರೆ ನಾಚಿಕೆಯಾಗಬೇಕು. ಕಾರ್ಯಕ್ರಮ ಗಳು ಪ್ರತಿ ತಿಂಗಳು, ಪ್ರತಿವಾರ ನಡೆಯುತ್ತಲೇ ಇದ್ದರೂ ಕಾರ್ಯ ಗಳೊಂದೂ ಆಗುತ್ತಿಲ್ಲ. ಪ್ರಾಥಮಿಕ ಆರೋಗ್ಯ ಕಾರ್ಯಗಳಲ್ಲಿ ಜನರ ಸಹಭಾಗಿತ್ವ ಇಲ್ಲದಿರುವುದು, ಖಾಸಗೀಕರಣ, ಉದಾರೀಕರಣ ಹಾಗೂ ಜಾಗತೀಕರಣದ ನೀತಿಯಿಂದಾಗಿ ಆರೋಗ್ಯ ಪರಿಸ್ಥಿತಿ ಸುಧಾರಿಸಿಲ್ಲ ವೆಂದೂ ಭಾವಿಸಬಹುದು.

ಆರೋಗ್ಯ ಪಾಲನೆಯಲ್ಲಿ **'ಅಲ್ಮಾಆಟ'*** ಘೋಷಣೆಯು ಹೀಗಿತ್ತು: ಅಗತ್ಯ ಆರೋಗ್ಯ ಪಾಲನೆಯಲ್ಲಿ ಪ್ರಾಥಮಿಕ ಆರೋಗ್ಯ ಪಾಲನೆಯೆಂದರೆ, ಸಮುದಾಯ ದ ಎಲ್ಲಾ ಕುಟುಂಬಗಳಿಗೂ, ವ್ಯಕ್ತಿಗಳಿಗೂ ಆರೋಗ್ಯದ ತಂತ್ರ ಮತ್ತು ವಿಧಾನಗಳ ಬಳಕೆ ಆಧಾರಿತವಾಗಿ ಕೈಗೊಳ್ಳವುದು; ಸ್ವಾವಲಂಬನೆ ಹಾಗು ಸ್ವ ನಿರ್ಧಾರದ ಮೂಲಕ ಮುನ್ನಡೆಯ ಪ್ರತಿ ಹಂತದಲ್ಲೂ ಜನರು ಭರಿಸಬಲ್ಲ ಮಟ್ಟದಲ್ಲಿಯೇ ಕೈಗೊಳ್ಳುವುದು; ಇದರ ಕಾರ್ಯ ಹಾಗೂ ಲಕ್ಷಣಗಳು ಜನರ ಸಮೀಪಕ್ಕೆ ಅವರ ಕಾರ್ಯಕ್ಷೇತ್ರಕ್ಕೆ ತಲುಪುವುದು; ನಿರಂತರ ಆರೋಗ್ಯ ಪಾಲನೆಯ ಪ್ರಾಥಮಿಕ ಅಂಶವಾಗಿರುವುದು; ಪ್ರಾಥಮಿಕ ಆರೋಗ್ಯ ಪಾಲನೆಯೆಂದರೆ ಆರೋಗ್ಯ, ಶಿಕ್ಷಣ, ಆಹಾರ ಪೂರೈಕೆಗೆ ಪ್ರೋತ್ಸಾಹ ಮತ್ತು ಮೂಲ ನೈರ್ಮಲ್ಯಕ್ಕಾಗಿ ಸಾಕಷ್ಟು ನೀರು ಪೂರೈಕೆ, ಮಗು ಹಾಗೂ ಬಾಣಂತಿಯ ಆರೋಗ್ಯ ಪಾಲನೆ, ಕುಟುಂಬ ಯೋಜನೆ, ಪ್ರಮುಖ ಸೋಂಕು ಕಾಯಿಲೆಗಳಿಗೆ ಚಿಕಿತ್ಸೆ ಮತ್ತು ಅಗತ್ಯ ಔಷಧಿಗಳ ಪೂರೈಕೆ ಇವೆಲ್ಲವನ್ನೂ ಒಳಗೊಂಡಿದೆ.

ಸ್ವಾತಂತ್ರ್ಯಾನಂತರ ನಮ್ಮ ದೇಶದಲ್ಲಿ ಜನಾರೋಗ್ಯ ವಿಭಾಗದಲ್ಲಿ ಹೆಚ್ಚಿನ ಪ್ರಗತಿಯಾಗುತ್ತಾ ನಡೆದಿದೆ. ಆಸ್ಪತ್ರೆಗಳು, ಹೆಚ್ಚು ತಜ್ಞ ವೈದ್ಯರೂ, ಹೆಚ್ಚು ಮೆಡಿಕಲ್ ಕಾಲೇಜುಗಳೂ ಸ್ಥಾಪನೆಯಾಗ ತೊಡಗಿದವು. ಬೀದಿಗೆ ನಾಲ್ಕು ಕ್ಲಿನಿಕ್‌ಗಳು, ಒಂದೊಂದು ಬಡಾವಣೆಯಲ್ಲೂ ನಾಲ್ಕಾರು ನರ್ಸಿಂಗ್ ಹೋಮ್‌ಗಳು, ಮಧ್ಯದಲ್ಲಿ ಸರ್ಕಾರಿ ಆರೋಗ್ಯ ಕೇಂದ್ರಗಳು ಕಾಣುತ್ತಿವೆ. ಆದರೂ ಸಾರ್ವಜನಿಕರಿಗೆ ಸಮಯಕ್ಕೆ ಸರಿಯಾದ ಸೂಕ್ತ ಚಿಕಿತ್ಸೆ ದೊರಕುತ್ತಿಲ್ಲ. ಹೆಚ್ಚಿನ ಜವಾಬ್ದಾರಿ ಸರ್ಕಾರಿ ಆರೋಗ್ಯಕೇಂದ್ರ ಆಸ್ಪತ್ರೆಗಳ ಮೇಲಿವೆ. ಕರ್ನಾಟಕದಲ್ಲೀಗ ಇಪ್ಪತ್ತೈದುಸಾವಿರ ಜನ ಸಂಖ್ಯೆಗೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರದ ಸೌಲಭ್ಯ ಒದಗಿಸಲಾಗಿದೆ. ಅಂಕಿ -ಅಂಶಗಳನ್ನೂ ಸಾರ್ವಜನಿಕರಿಗಾಗಿ ತಿಳಿಸುತ್ತಿದ್ದೇನೆ. (1996 ರಲ್ಲಿ)

| | | |
|---|---|---|
| ಪ್ರಾಥಮಿಕ ಆರೋಗ್ಯ ಕೇಂದ್ರಗಳು | = | 1428 |
| ಪ್ರಾಥಮಿಕ ಆರೋಗ್ಯ ಘಟಕಗಳು | = | 204 |
| ಪ್ರಾಥಮಿಕ ಉಪ ಕೇಂದ್ರಗಳು | = | 7793 |
| ಬಾಣಂತಿ ಸೇವಾ ಕೇಂದ್ರಗಳು | = | 39 |

ಇದು ಸರ್ಕಾರದ ಆಸ್ಪತ್ರೆಯ ಸ್ಥಿತಿ. ಗತಿಯೇನಾಗಿದೆ ನೋಡೋಣ :

ಶ್ರೀಮಂತ ರಾಕ್ ಫೆಲ್ಲರ್ ಸಂಸ್ಥೆಯಂತಹುವುಗಳ ಬೆಂಬಲ ದೊಂದಿಗೆ ವಿಶ್ವ ಬ್ಯಾಂಕ್ ಕಾರ್ಯಪ್ರವೃತ್ತವಾಯಿತು. 1985ರ ವೇಳೆಗೆ ಸಮಗ್ರ ಆರೋಗ್ಯ ಪಾಲನೆಯನ್ನು ಕೈಬಿಟ್ಟು ಆಯ್ದ ಪ್ರಾಥಮಿಕ ಆರೋಗ್ಯ ಪಾಲನೆಯತ್ತ ವಾಲಿದರು. ಭಾರತದ ಆದ್ಯತಾ ಕ್ಷೇತ್ರವನ್ನು ಕುಟುಂಬ ಯೋಜನೆಯೆಂದು ಘೋಷಿಸಿದರು. ಅನಂತರದಲ್ಲಿ ಮಹಿಳೆ ಮತ್ತು ಮಕ್ಕಳ ಆರೋಗ್ಯ ಪೋಷಕ ಆಹಾರ, ಕ್ಷಯ ಮತ್ತು ಲೈಂಗಿಕ ರೋಗಗಳ

* **ಅಲ್ಮಾ ಆಟ**: ರಷ್ಯಾದೇಶದ ಒಂದು ಸ್ಥಳ ಅಲ್ಮಾ ಆಟ. ಹಲವು ದೇಶಗಳ ಆರೋಗ್ಯ ಕಾರ್ಯದರ್ಶಿಗಳು ಸಭೆಸೇರಿ ಪ್ರಾಥಮಿಕ ಆರೋಗ್ಯದ ಬಗ್ಗೆ ತೆಗೆದುಕೊಂಡ ತೀರ್ಮಾನಗಳಿಗೆ ಆ ಸ್ಥಳದ ಹೆಸರನ್ನೇ ಕೊಡಲಾಗಿತ್ತು.

ಲಕ್ಷಣವನ್ನು ಹುಡುಕತೊಡಗಿದರು. ಆರೋಗ್ಯ-ಆದ್ಯತೆಗಳನ್ನು ಸಮುದಾಯವು ನಿರ್ಧರಿಸುವ ಬದಲಿಗೆ ಅಲ್ಮಾ ಆಟಾ ಘೋಷಣೆಯನ್ನು ಸಮುದಾಯವೇ ನಿರ್ಧರಿಸಲು ಸೂಚಿಸಲಾಯಿತು. ಆದ್ಯತೆಗಳನ್ನು ಇದರಿಂದ ದೂರದ ರಾಜಧಾನಿಯಲ್ಲಿಯೋ ವಿಶ್ವ ಬ್ಯಾಂಕಿನಲ್ಲಿಯೋ ನಿರ್ಧರಿಸಿ, ಇಡೀ ಜನತೆಯ ಮೇಲೆ ಹೇರತೊಡಗಿದಂತಾಯಿತು. ದೂರದ ಆರೋಗ್ಯ ಆಡಳಿತಶಾಹಿಯು ನಿರ್ಧರಿಸಿದ ಆರೋಗ್ಯ ಆದ್ಯತೆ!. ಜನಗಳಿರಲಿ, ಈ ಆಯ್ಕೆ ಕೈಗೊಳ್ಳುವವರು ಆರೋಗ್ಯ ಅಧಿಕಾರಿಗಳೂ ಅಲ್ಲ. ಅಪಾಯಕರ, ಮಾರಣಾಂತಿಕ ಕಾಯಿಲೆಗಳಿಗೆ ಪ್ರಾಥಮಿಕ ಕೇಂದ್ರಗಳಿಗೆ ಚಿಕಿತ್ಸ ನೀಡಲು ಸೌಲಭ್ಯಗಳೂ, ಅವಕಾಶಗಳೂ ಇರಲಿಲ್ಲ. ಹೀಗಾಗಿ ತಮ್ಮ ಕೈಲಿ ಚಿಕಿತ್ಸೆ ನೀಡಲಾಗದ ರೋಗಿಗಳನ್ನು ಸೌಲಭ್ಯಗಳುಳ್ಳ ಆಸ್ಪತ್ರೆಗೆ ಸಾಗಿಸಬಹುದೆಂದು ನಿರ್ದೇಶಿಸಿದರು. ಅಂದ ಮಾತ್ರಕ್ಕೆ ಈ ನಿರ್ದೇಶನ ವ್ಯವಸ್ಥೆಯು ಸರಿಯಾಗಿದೆಯೆಂದಲ್ಲ.

ಗರ್ಭಿಣಿಯರಿಗೆ ನೀಡಬೇಕಾದ ಪಾಲನೆಯ ಅವಕಾಶ ವಿದ್ದಾಗ್ಯೂ ಮಿಡ್ ವೈಫ್‌ಗಳಿದ್ದಾಗ್ಯೂ ವಿಶೇಷ ಗಂಡಾಂತರ ಸಂದರ್ಭದಲ್ಲಿ ಏನೂ ಮಾಡಲಾಗುತ್ತಿಲ್ಲ. ನಿರ್ದೇಶಕ ಆಸ್ಪತ್ರೆಗಳು ಇಲ್ಲದಿದ್ದಾಗ ಗರ್ಭಿಣಿಯರ ಯೋಗ ಕ್ಷೇಮದ ಉದ್ದೇಶವೇ ನಷ್ಟವಾಗುತ್ತದೆ. ರಕ್ತಹೀನತೆಗೆ ಚಿಕಿತ್ಸೆ, ಧನುರ್ವಾಯು ತಡೆಗಟ್ಟುವಿಕೆಗಳನ್ನು ಹೊರತುಪಡಿಸಿದರೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕುಟುಬ ಯೋಜನಾ ಫಲಾನುಭವಿಗಳಿಗೆ ಸೇವೆ ಮಾಡುತ್ತಿವೆ. ಹೆರಿಗೆಯ ತೊಂದರೆಯ ಬಗ್ಗೆ ತಿಳಿದಾಗ ಖಾಸಗೀ ಸಂಸ್ಥೆಗಳಲ್ಲಿನ ಸೇವೆಯೇ ಸಹಾಯಕ್ಕೆ ಬಂದಿದೆ. ಹೀಗಾಗಿ ಖಾಸಗಿ ಆರೋಗ್ಯ ಕೇಂದ್ರಗಳು ಹುಲುಸಾಗಿ ಬೆಳೆಯುತ್ತಾ ನಳನಳಿಸತೊಡಗಿವೆ.

ಸರ್ಕಾರಿ ಆರೋಗ್ಯ ಕೇಂದ್ರಗಳು ಸೇವೆ ನೀಡುವಲ್ಲಿ ಸೋಲುತ್ತಿರುವುದಾದರೂ ಯಾಕೆ? ಸರ್ಕಾರ ಎಷ್ಟೇ ಹೆದರಿಸಿದರೂ ಒತ್ತಡ ಹೇರಿದರೂ ಸರ್ಕಾರಿ ಆರೋಗ್ಯ ಕೇಂದ್ರಗಳು ಖಾಸಗಿ ಆರೋಗ್ಯ ಕೇಂದ್ರಗಳಂತೆ ಶುಚಿಯಾಗಿ ಸೇವೆ ನೀಡುವಲ್ಲಿ ಸಫಲವಾಗುತ್ತಿಲ್ಲ. ನಗರದಲ್ಲೇ ಹೀಗಾದರೆ, ಇನ್ನು ಗ್ರಾಮಾಂತರ ಪ್ರದೇಶದ ಮಹಿಳೆಯರ ಪಾಡೇನೆಂದು ಒಮ್ಮೆ ಯೋಚಿಸಿದರೆ ಎದೆ ಝುಲ್ಲೆನ್ನುತ್ತದೆ. ಸಾವು – ನೋವುಗಳಿಗಂತೂ ಲೆಕ್ಕವಿರುವುದಿಲ್ಲ. ನಮ್ಮ ದೇಶದಲ್ಲಿ ಬಡವರು ಸತ್ತರೆ ಯಾರಿಗೂ ಅಷ್ಟು ಬೇಸರವಾಗುವುದಿಲ್ಲ! ಹೀಗೆ ಮನೆಯಲ್ಲಿಯೇ ಹೆರಿಗೆಯಾಗಿ ಸತ್ತವರೆಷ್ಟೋ? ಆಸ್ಪತ್ರೆಯಿಂದ ಆಸ್ಪತ್ರೆಗೆ ಸಾಗಿಸುವಾಗ ಹಾದಿಯಲ್ಲಿಯೇ ಉಸಿರು ಕಳೆದು ಕೊಂಡವರೆಷ್ಟೋ? ಅಂಕಿ – ಅಂಶ ಇಟ್ಟುಕೊಂಡರೆ ಭಯದಿಂದ ಹೃದಯವೇ ನಿಂತು ಹೋದೀತು.

ಇಂಥಾ ಸಂದರ್ಭಗಳಿಗೆ ಸಹಾಯ ಮಾಡಲಾಗದೆ ಇವು ಹಾಳು ಮಠದಂತೆ ಪಾಳು ಬೀಳಲು ಕಾರಣಗಳೇನು?

1 ಸೂಕ್ತ ಹಾಗೂ ಅಲ್ಲಿಗೆ ಎಷ್ಟು ಬೇಕೋ ಅಷ್ಟು ಸಿಬ್ಬಂದಿ ವರ್ಗದವರನ್ನು ಆಯ್ಕೆ ಮಾಡಿ ಕಳುಹಿಸದೇ ಇರುವುದು,

2 ಅಲ್ಲಿರುವ ವಸತಿಗೃಹಗಳಲ್ಲಿ ಸಿಬ್ಬಂದಿಗಳು, ಸ್ಥಳೀಯವಾಗಿ ಅಲ್ಲಿ ವಾಸಿಸದೇ ಇರುವುದರಿಂದ ರೋಗಿಗಳಿಗೆ ಬೇಕಾದ ತುರ್ತು ಪರಿಸ್ಥಿತಿಯಲ್ಲಿ ವೈದ್ಯರ ನೆರವು ಸಿಗದೇ ಇರುವುದು. ವೈದ್ಯರಿದ್ದಾಗ ಮಾತ್ರ ತುರ್ತು ಪರಿಸ್ಥಿಗಳು, ಅಪಘಾತಗಳು ಸಂಭವಿಸುತ್ತದೆಯೆ?

3 ಗ್ರೂಪ್ ಡಿ ನೌಕರರು ಉಳಿದ ಸಿಬ್ಬಂದಿಯವರಿಗಿರುವಂತೆ ಮೂರು ವರ್ಷಕ್ಕೊಮ್ಮೆ ಬೇರೆ ಕಡೆ ವರ್ಗಾವಣೆ ಆಗದೇ ಇರುವುದರಿಂದ ಅವರು ಬೇರುಬಿಟ್ಟು ಆಲದಮರವಾಗಿ ಬಿಟ್ಟಿರುತ್ತಾರೆ. ಮೂರು ವರ್ಷಕ್ಕೊಮ್ಮೆ ವರ್ಗವಾಗಿ ಬರುವ ವೈದ್ಯರು, ನರ್ಸ್‌ಗಳೆಂದರೆ ಅವರಿಗೆ ತಾತ್ಸಾರ. ಅವರೇನಾದರು ಇವರ ಮೇಲೆ ಅಧಿಕಾರ ಚಲಾಯಿಸಿದರೆ ಮುಗಿಯಿತು, ಸ್ಥಳೀಯ, ಗೂಂಡಾಗಳಿಂದ ಆಕ್ರಮಣಮಾಡಿಸಿ ಹೆದರಿಸಲೂ ಹೇಸುವುದಿಲ್ಲ.

5 ಔಷಧಿಗಳ ವಿತರಣೆ ತೀರಾ ಅಧ್ವಾನವಾಗಿರುತ್ತದೆ. ಜಿಲ್ಲಾ ಆರೋಗ್ಯ ಕೇಂದ್ರ ಕಛೇರಿಯಿಂದ ಆ ಆರೋಗ್ಯ ಕೇಂದ್ರದ ವೈದ್ಯ-ವೈದ್ಯೆ ತಮ್ಮ ಕೇಂದ್ರಕ್ಕೆ ಔಷಧಿಗಳನ್ನು ತರುವುದೆಂದರೆ ಅದೊಂದು ದೊಡ್ಡ ಸಾಹಸವಾಗಿರುತ್ತದೆ. ಅಧಿಕಾರಿಗೆ ಲಂಚ ನೀಡದಿದ್ದರೆ ಔಷಧಿಗಳು ತಿಂಗಳುಗಳಾದರೂ ದೊರಕುವುದೇ ಇಲ್ಲ !

6 ಅಂಥಾ ಸಂದರ್ಭಗಳಲ್ಲಿ ಜನಗಳ ನಿಂದನೆ ತಪ್ಪಿಸಿಕೊಳ್ಳಲು ತಾನೇ ತಂದು ಉಪಯೋಗಿಸಿರುವುದೂ ಉಂಟು.

ಆತನಿಗಾದರೂ ಆಕೆಗಾದರೂ ಸಂಬಳಬರುವುದು ತಿಂಗಳಿಗೊಂದು ಬಾರಿಯಲ್ಲ, ಮೂರು-ನಾಲ್ಕು ತಿಂಗಳಿಗೊಂದು ಬಾರಿ. ಅದಕ್ಕೆ ಜಿಲ್ಲಾ ಪರಿಷತ್‌ನವರ ಕೃಪೆಯಿರಬೇಕಾಗುತ್ತದೆ. ಹೀಗಿರುವಾಗ, ಹತಾಶರಾದ ವೈದ್ಯರಿಂದ ಎಂಥಾ ಸೇವೆಯನ್ನು ನಿರೀಕ್ಷಿಸಲು ಸಾಧ್ಯ? ಅಷ್ಟಕ್ಕೂ ವೈದ್ಯರುಗಳೇನು ದೇವರುಗಳೂ ಅಲ್ಲ, ಯಂತ್ರಗಳೂ ಅಲ್ಲ.

ಇಷ್ಟಾದರೂ ಕೆಲವುಕಡೆ ವೈದ್ಯ-ರೋಗಿಗಳ ಸಂಬಂಧ ಉತ್ತಮವಾಗಿದ್ದರೆ ಅಲ್ಪ-ಸ್ವಲ್ಪ ಒಳ್ಳೆಯ ಚಿಕಿತ್ಸೆ ದೊರಕುತ್ತಿರುವುದನ್ನು ಕಾಣಬಹುದು. ಉಪಾಧ್ಯಾಯರು ಮತ್ತು ವೈದ್ಯರು ಕೆಲಸದ ನಂತರ ನಿಷ್ಪ್ರಯೋಜಕರು ಎಂಬ ನಾಣ್ಣುಡಿಯೇ ಇದೆಯಂತೆ !

ವೈದ್ಯರುಗಳಿಗೂ ಜವಾಬ್ದಾರಿಗಳಿದ್ದಂತೆ ರೋಗಿಗಳ ಮನೆಯವರಿಗೂ ಜವಾಬ್ದಾರಿಗಳಿರಬೇಕಾಗುತ್ತದೆ. ಗರ್ಭಿಣಿ ಮಹಿಳೆಯು ಪ್ರತಿ ತಿಂಗಳು ಪ್ರಸವಪೂರ್ವ ಚಿಕಿತ್ಸೆ, ಆರೈಕೆಗಾಗಿ ಬರುತ್ತಿರುತ್ತಾಳೆ, ಹಾಗೆಯೇ ಅವಳಿಗೊಂದು ಪ್ರಸವಪೂರ್ವ ಚಿಕಿತ್ಸಾಕಾರ್ಡನ್ನು ಕೊಟ್ಟಿರುತ್ತಾರೆ. ವೈದ್ಯರು ಅದರಲ್ಲಿ ಹೆರಿಗೆಯ ದಿನಾಂಕ ರಕ್ತದ ಪರೀಕ್ಷೆಯ ರಿಪೋರ್ಟ್ಸ್‌ಗಳನ್ನೂ ಸಹಾ ನಮೂದಿಸಿರುತ್ತಾರೆ. ಆ ಕಾರ್ಡನ್ನು ತಮ್ಮ ಬಳಿ ಸುರಕ್ಷಿತವಾಗಿಟ್ಟುಕೊಂಡು ಪ್ರಸವದ ಸಮಯದಲ್ಲಿ ಆಸ್ಪತ್ರೆಗೆ ತಂದರೆ ವೈದ್ಯರಿಗೂ, ರೋಗಿಗೂ ಅನುಕೂಲವಾಗುತ್ತದೆ. ಆದರೆ ಬಹಳಷ್ಟು ಸಲ ಅವರುಗಳು ಕಾರ್ಡನ್ನು ತರುವುದಿಲ್ಲ. ಕೇಳಿದರೆ,

"ಹೆರಿಗೆ ನೋವು ಹೇಳಿಕೇಳಿ ಬರುತ್ತಾ ಡಾಕ್ಟ್ರೆ? ಅವಸರದಿಂದ ಬರ್ಬೇಕಾಯ್ತು ಮರೆತು ಬಂದೆವು" ಎಂದು ನಿರ್ಲಕ್ಷ್ಯದಿಂದ ಹೇಳುತ್ತಾರೆ.

"ಅದರಲ್ಲಿ ಹೆರಿಗೆ ದಿನಾಂಕ ಕೊಟ್ಟಿದ್ದೆವಲ್ಲಾ, ರಕ್ತದ ಗ್ರೂಪ್ ಏನಂತ ನೆನಪಾದ್ರೂ ಇದೆಯಾ?"– ವೈದ್ಯರು ಹತಾಶರಾಗಿ ಕೇಳುತ್ತಾರೆ.

"ನೀವೇ ತಾನೇ ನೋಡ್ತ ಇದ್ದೋರು, ನಿಮಗೇ ನೆನಪಿರಬೇಕಲ್ಲಾ?"


ಇದಕ್ಕೇನು ಹೇಳುತ್ತೀರಿ? ಹೆರಿಗೆಯ ನಿರೀಕ್ಷೆ ಮಾಡುತ್ತಾ ಗುಂಪು

*ಅನೇಕ ಅಡ್ಡಿಗಳ ನಡುವೆಯು ಮಾನಸ ಪ್ರಕಟವಾಗುತ್ತಿರುವುದು ಆನಂದದ ವಿಷಯ. ಪತ್ರಿಕೆಯು ಮಹಿಳಾ ಅಧ್ಯಯನದ ವಿದ್ಯಾರ್ಥಿಗಳಿಗೆ ಆಕರ ಮೂಲವಾಗಿದೆ. ಕರ್ನಾಟಕದ ಮಹಿಳಾ ಚಳವಳಿ ಹಾಗೂ ಮಹಿಳಾ ಪತ್ರಿಕೆಗಳ ಬಗ್ಗೆ ತಿಳಿಸುವಾಗ ಮಾನಸ ಗುಂಪು ಹಾಗೂ ಮಾನಸ ಪತ್ರಿಕೆ ಪ್ರಮುಖ ಉದಾಹರಣೆಯಾಗಿದೆ.* **ಡಾ॥ ಹೇಮಲತಾ ಹೆಚ್.ಎಂ., ಬಿಜಾಪುರ**

ಕಟ್ಟಿಕೊಂಡು, ಆತಂಕ ಗಾಬರಿಯನ್ನೇ ಮುಂದಿಟ್ಟುಕೊಂಡು ಬರುವ ಮನೆಯವರಿಗೆ ಯಾವ ಜವಾಬ್ದಾರಿ ಇದೆ?

ವೈದ್ಯರುಗಳಿಗೆ ಜವಾಬ್ದಾರಿ ಹಾಗೂ ಹಕ್ಕುಗಳಿರುವ ಹಾಗೆ ರೋಗಿಗಳಿಗೂ ಇರುತ್ತವೆ. ಇಂಡಿಯನ್ ಪೀನಲ್‌ಕೋಡ್ ಕಾಂಟ್ರಾಕ್ಟ್ ಕಾಯಿದೆ ವೈದ್ಯಕೀಯ ಪರಿಷತ್ತಿನ ನಿಬಂಧನೆಗಳ ಮೇರೆಗೆ ನೀತಿ ಸಂಹಿತೆಯನ್ನು ಕ್ರೋಡೀಕರಿಸಿ ವೈದ್ಯರ ಜವಾಬ್ದಾರಿಗಳನ್ನು ವಿಂಗಡಿಸಿರುವ ಹಾಗೆ, ರೋಗಿಗಳ ಹಕ್ಕುಗಳಿಗೂ ಒಂದು ಪಟ್ಟಿಯಿದೆ. ಮಲೇಷಿಯಾದಲ್ಲಿರುವ ಅಂತರರಾಷ್ಟ್ರೀಯ ಬಳಕೆದಾರರ ಸಂಸ್ಥೆಗಳ ಒಕ್ಕೂಟ, ಪುದುಚೇರಿಯ ಜಿಪ್‌ಮರ್‌ಸಂಸ್ಥೆ ಕ್ರೋಡೀಕರಿಸಿ ರೋಗಿಯ ಹಕ್ಕುಗಳನ್ನು ತಯಾರಿಸಿವೆ. 'ವೈದ್ಯರು ತಮ್ಮ ಜವಾಬ್ದಾರಿಯನ್ನು ಅರಿತುಕೊಂಡು ನಡೆದಾಗ ಆತನು ತನ್ನ ಹಕ್ಕನ್ನು ಚಲಾಯಿಸಲು ಅರ್ಹನಾಗುತ್ತಾನೆ. ರೋಗಿಯೂ ತನ್ನ ಜವಾಬ್ದಾರಿಯನ್ನು ಅರಿತುಕೊಂಡಿದ್ದಾಗ ಮಾತ್ರ ವೈದ್ಯರ ಬಗ್ಗೆ, ವೈದ್ಯಕೀಯದ ಬಗ್ಗೆ ದೂರಲು ಅರ್ಹನಾಗಿರುತ್ತಾನೆ' ಎಂದಿದ್ದಾರೆ. ಹಾಗಾದರೆ ವೈದ್ಯರ ಮತ್ತು ರೋಗಿಗಳ ಜವಾಬ್ದಾರಿಗಳು ಯಾವುವು :

1 ರೋಗಿಗಳಿಗೆ ಸಂಬಂಧಪಟ್ಟವು.
2 ಸಾರ್ವಜನಿಕರಿಗೆ ಸಂಬಂಧಪಟ್ಟವು.
3 ಕಾನೂನಿಗೆ ಸಂಬಂಧಪಟ್ಟವು.
4 ವೃತ್ತಿಗೆ ಸಂಬಂಧಿಸಿದ ರೀತಿ ನೀತಿಗಳ ಸಂಹಿತೆಯನ್ನು ಪಾಲಿಸುವುದು.
5 ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತನ್ನನ್ನು ತೊಡಗಿಸಿಕೊಳ್ಳದಿರುವುದು.
6 ವೈದ್ಯರ ಮಧ್ಯೆ ಇರುವ ಪರಸ್ಪರ ಸಂಬಂಧಗಳು
7 ಅನಧಿಕೃತವಾಗಿ ವೈದ್ಯ ವೃತ್ತಿಯಲ್ಲಿ ತೊಡಗಬಾರದು.
8 ಸ್ವಯಂ ಪ್ರಚಾರ ಮಾಡಿ ಕೊಳ್ಳಬಾರದು.
9 ಸುಳ್ಳು ಸರ್ಟಿಫಿಕೇಟ್ಸ್‌ಗಳನ್ನು ಕೊಡಬಾರದು
10 ಸ್ವಂತ ಔಷಧಿ ಅಂಗಡಿ ಹೊಂದಿರಬಾರದು ಹಾಗೂ ರೋಗಿಯ ವೈಯಕ್ತಿಕ ವಿವರವನ್ನು ಗೌಪ್ಯವಾಗಿಡಬೇಕು.
11 ಚಿಕಿತ್ಸೆಗೆಂದು ಬರುವ ರೋಗಿಗಳಿಗೆ ಸೂಕ್ತ ಮಾಹಿತಿ, ಮಾರ್ಗದರ್ಶನ ನೀಡುವುದು.



ರೋಗಿಯ ಒಪ್ಪಿಗೆಯು ಬಾಯಿ ಮಾತಿನದ್ದಾಗಿರಬಹುದು. ಆದರೆ ಲಿಖಿತರೂಪದಲ್ಲಿ ಪಡೆಯುವುದು ಒಳ್ಳೆಯದು. ರೋಗಿಯು ಒಪ್ಪಿಗೆಯನ್ನು ಕೊಡುವ ಸ್ಥಿತಿಯಲ್ಲಿ ಇಲ್ಲದಿದ್ದಾಗ ತೀರಾಹತ್ತಿರದ ಸಂಬಂಧಿಕರಿಂದ ಒಪ್ಪಿಗೆಯ ಪತ್ರಕ್ಕೆ ಸಹಿಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಯಾಕೆಂದರೆ ವೈದ್ಯರುಗಳಿಗೆ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಕೆಲಸ ನಿರ್ವಹಿಸುತ್ತಿರುವಾಗ ಯಾವ ಭದ್ರತೆಯೂ ಯಾರ ಸಹಾಯವೂ ಸಹಕಾರವೂ ಹಾಗು ಸೌಲಭ್ಯಗಳೂ ಚೆನ್ನಾಗಿರುವುದಿಲ್ಲ. ಅವರನ್ನು ಅವರೇ ಕಾಪಾಡಿಕೊಳ್ಳುವುದೂ ರೋಗಿಯನ್ನು ಕಾಪಾಡಿಕೊಳ್ಳುವಷ್ಟೇ ಮುಖ್ಯವಾಗಿರುತ್ತದೆ.

ಮಹಿಳೆಯೇ ಆಗಿರಲಿ ಪುರುಷರೇ ಆಗಿರಲಿ ಕಾಯಿಲೆಯ ನೋವು ನಷ್ಟ ಒಂದೇ.ಹಾಗೆಯೇ ರೋಗಿಯ ಜವಾಬ್ದಾರಿಗಳು ಹೀಗಿವೆ :

1. ಚಿಕಿತ್ಸೆಗೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು, ಕಾಗದ ಪತ್ರಗಳನ್ನು ಜಾಗರೂಕತೆಯಿಂದ ಇಡಬೇಕು. ಔಷಧಿಯ ಚೀಟಿಗಳು, ಕೊಂಡುಕೊಂಡ ರಸೀದಿಗಳನ್ನು ಎಚ್ಚರಿಕೆಯಿಂದ ಇಟ್ಟುಕೊಳ್ಳಬೇಕು.
2. ವೈದ್ಯರು ಪವಾಡ ಪುರುಷರಲ್ಲ, ಅವರೂ ಮಾನವರೆಂಬ ಸತ್ಯ ತಿಳಿದಿರಬೇಕು. ಅವರು ಹೇಳಿದಂತೆ ಔಷಧಿ ಸೇವಿಸಬೇಕು. ಹಾಗೆಯೇ ಔಷಧಿಗಳ ಅಡ್ಡಪರಿಣಾಮಗಳ ಬಗ್ಗೆಯೂ ತಿಳಿದುಕೊಂಡು, ಹಾಗೇನಾದರೂ ವ್ಯತ್ಯಾಸವಾದರೆ ತತ್‌ಕ್ಷಣವೇ ಅದೇ ವೈದ್ಯರ ಬಳಿಗೆ ಹೋಗಬೇಕು.
3. ಆಸ್ಪತ್ರೆಗೆ ಹೋಗುವಾಗ ನಿಮ್ಮ ಗಾಬರಿ, ಆತಂಕದಿಂದ ಮನೆಯವರೆಲ್ಲಾ ಗುಂಪು ಕಟ್ಟಿಕೊಂಡು ಹೋಗಕೂಡದು. ರೋಗಿಯ ರೋಗದ ಬಗ್ಗೆ ತಿಳಿದವರೊಬ್ಬರಿದ್ದರೆ ಸಾಕು. ವೈದ್ಯರಬಳಿ ಸುಳ್ಳುಹೇಳಬಾರದು ಹಾಗೂ ಕಾಯಿಲೆಯನ್ನು ವೈಭವೀಕರಿಸಬಾರದು ಮತ್ತು ಯಾವ ಔಷಧ ತೆಗೆದು ಕೊಂಡರೆ 'ಅಲರ್ಜಿ' ಯಾಗುತ್ತದೆಯೆಂದು ವೈದ್ಯರಿಗೆ ತಿಳಿಸಿದರೆ ಒಳ್ಳೆಯದು. ಪರೀಕ್ಷಿಸುವಾಗ ಸಂಪೂರ್ಣವಾಗಿ ಸಹಕರಿಸಬೇಕು.

ಹೀಗೆ ರೋಗಿ- ವೈದ್ಯರ ಸಂಬಂಧ ಸ್ನೇಹಮಯವಾಗಿದ್ದರೆ ಇಬ್ಬರಿಗೂ ಉಪಯೋಗವಾಗುತ್ತದೆ. ಎಷ್ಟೇ ಸೌಕರ್ಯಗಳಿರದಿದ್ದರೂ ಕಾಯಿಲೆ ಗುಣವಾಗಿಬಿಡುತ್ತದೆ.

ಆದರೆ ಈ ಸುಂದರ ಸ್ನೇಹ-ಸಂಬಂಧದ ಕೊಂಡಿಯನ್ನು ಕಳಚಿ ಹಾಕುವವರು ಯಾರು? ರೋಗಿಗಳು ನೋವನ್ನು ಅನುಭವಿಸುವಂತೆ ಮಾಡುವವರು ಯಾರು? ಒತ್ತಡ ಹೇರಿ ಕತ್ತರಿಸಿಹಾಕುವುದೆಂದರೆ:

1. ಆರೋಗ್ಯ ಕೇಂದ್ರಗಳಲ್ಲಿ ಸೌಕರ್ಯಗಳಿಲ್ಲದೇ ಇರುವುದು ಮತ್ತು ರೋಗಿಗೆ ಅವಶ್ಯಕತೆಯಿದ್ದಾಗ ವೈದ್ಯರು ದೊರಕದೇ ಹೋಗುವುದು, ನರಳುತ್ತಿರುವವರನ್ನು ಕಾಯಿಸುವುದು, ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆಯುವಂತೆ ಮಾಡುವುದು ಇತ್ಯಾದಿ.
2. ರಾಜಕಾರಣಿಗಳು ಮತ್ತು ಅವರ ಚೇಲಾಗಳ ದಬ್ಬಾಳಿಕೆ.
3. ಶ್ರೀಮಂತ ವರ್ಗದವರು ಹಾಗೂ ಸಣ್ಣಪತ್ರಿಕೆಗಳ ಸಂಪಾದಕ, ಅಥವಾ ವರದಿಗಾರರ ಸುಲಿಗೆಯ ತಂತ್ರ ಹಾಗೂ ಭಯ ಎಂದರೆ ಆಶ್ಚರ್ಯವಾದರೂ ಸತ್ಯದ ವಿಷಯ.

ಇಷ್ಟೆಲ್ಲಾ ಹೇಳಿದಮೇಲೆ ದೊಡ್ಡ ಆರೋಪದ ಬಗ್ಗೆಯೂ ಹೇಳಬೇಕಾಗುತ್ತದೆ. ಅದು ಲಂಚದ ಆರೋಪ. ಫೈಲನ್ನು ಒಂದು ಟೇಬಲ್ಲಿನಿಂದ ಮತ್ತೊಂದು ಟೇಬಲ್ಲಿಗೆ ಒಯ್ಯುವ ಜವಾನನಿಂದ ಹಿಡಿದು ಆಳುವ ದಿವಾನನವರೆಗೂ ಇದ್ದೇಇದೆ. ಇತ್ತೀಚಿನ ದಿನಗಳಲ್ಲಿ ಲಂಚಕೊಟ್ಟು, ಕೆಲಸ ಮಾಡಿಸಿಕೊಳ್ಳುವುದು ಸಹಜ ಹಾಗೂ ಸಮ್ಮತವೆನ್ನಿಸಿದೆ. ಲಂಚ ಕೊಟ್ಟರೂ ಕೆಲಸವಾಗದಿದ್ದಾಗ ಮಾತ್ರ ಭ್ರಷ್ಟಾಚಾರವೆಂದು ಆರೋಪ ಮಾಡುತ್ತಾರೆ. ರಾಜ್ಯಸರ್ಕಾರದ ನೌಕರರಿಗೆ ಸಿಗುವ ಸಂಬಳ, ಹೆಚ್ಚುತ್ತಿರುವ ಜವಾಬ್ದಾರಿ, ಏರುತ್ತಿರುವ ಬೆಲೆಗಳು, ಸೌಲಭ್ಯಗಳ ಕೊರತೆ, ಆಯಾವ್ಯಕ್ತಿಯ ಆಸೆ-ಆಮಿಷಗಳನ್ನು ಅವಲಂಬಿಸಿರುತ್ತದೆ.

ಆರೋಗ್ಯ ಕೇಂದ್ರಗಳನ್ನು ಹೆಚ್ಚು ಮಾಡುವ ಬದಲು ಮತ್ತು

ಗ್ರಾಮಾಂತರ ಪ್ರದೇಶಗಳಿಗೆ ಹೋಗಿ ಕೆಲಸ ಮಾಡಬೇಕೆಂದು ಒತ್ತಾಯ ಹೇರುವ ಬದಲು, ಈಗಾಗಲೇ ಇರುವ ಆರೋಗ್ಯ ಕೇಂದ್ರಗಳಿಗೆ ಹೆಚ್ಚಿನ ಸೌಲಭ್ಯಗಳು, ಸೌಕರ್ಯಗಳು, ಔಷಧಿಗಳ ವಿತರಣೆ, ಸಕಾಲದಲ್ಲಿ ಸಿಗುವ ವೈದ್ಯರುಗಳಿರುವಂತೆ ಮಾಡಿದಾಗ ಮಾತ್ರ ಸ್ವಾತಂತ್ರ್ಯ ಬಂದ ನಂತರದಲ್ಲಿ ನಾವೀಗ ಸುರಕ್ಷಿತ, ಹಾಗೂ ಆರೋಗ್ಯದಿಂದಿದ್ದೇವೆ ಎಂದು ಭಾವಿಸಿ ಕೊಳ್ಳಬಹುದು.

ಆದರೆ ಹಾಗಾಗಿಲ್ಲವೆನ್ನುವುದೇ ನಿರಾಶೆ, ವಿಷಾದದ ವಿಷಯ ವಾಗಿದೆ. ಈಗಲೂ ಮಹಿಳೆ ಆ್ಯಂಬುಲೆನ್ಸ್‌ನಲ್ಲಿ ಹೆರುತ್ತಾಳೆ, ಮಗು ಸಾಯುತ್ತದೆ. ಮಹಿಳೆ ಏಡ್ಸ್ ರೋಗಿಯೆಂದರೆ, ಆಕೆಯನ್ನು ಮುಟ್ಟದೇ ದೂರದಲ್ಲೇ ನಿಂತು, ಅವಳ ಗಂಡನ ಕೈಯಿಂದಲೇ ಹೆರಿಗೆ ಮಾಡಿಸುವ ವೈದ್ಯರಿರುವ ಮೀರತ್ ನಂತಹ ಸ್ಥಳಗಳು ಇನ್ನೂ ಇರುವುದೇ ನಾಚಿಕೆಯ ವಿಷಯ. ವೈದ್ಯ ಸಮೂಹ ತಲೆತಗ್ಗಿಸಬೇಕಾದದ್ದೇ!

* * *

ಇಂದು ಆರೋಗ್ಯದ ಬಗ್ಗೆ ಮಾತನಾಡುವಾಗ ಮಹಿಳೆಯರ ಆರೋಗ್ಯದ ಸ್ಥಿತಿ-ಗತಿಗಳ ಬಗ್ಗೆ ಹೇಳಲೇ ಬೇಕಾಗಿದೆ. ಮನೆಯಲ್ಲಿ ಒಂದು ಹೆಣ್ಣಿದ್ದರೆ ಕಣ್ಣಿದ್ದ ಹಾಗೆ, ಹೆಣ್ಣೊಂದು ಕಲಿತರೆ ಇಡೀ ಮನೆಯೇ ಕಲಿತಂತೆ ಹೀಗೆ ನೂರಾರು ನಾಣ್ಣುಡಿಗಳನ್ನು ಹೇಳುತ್ತಾರೆ. ಮೇಲ್ನೋಟಕ್ಕೆ ಹೆಣ್ಣುಮಕ್ಕಳ ಸ್ಥಿತಿ-ಗತಿಗಳು ವಿವಿಧರಂಗಗಳಲ್ಲಿ ಸುಧಾರಿಸಿದಂತೆ ಕಂಡರೂ ಆರೋಗ್ಯದ ದೃಷ್ಟಿಯಲ್ಲಿ ಮಾತ್ರ ಸುಧಾರಣೆ ಇಲ್ಲವೆಂದೇ ಹೇಳಬಹುದು. ಯೂನಿಸೆಫ್ ಪ್ರಕಾರ ಮಾತೃ ಮರಣದ ಸಂಖ್ಯೆ 450% ಎಂದು ದೃಢಪಡಿಸಿದೆ. ಅಪೌಷ್ಟಿಕತೆ ಮತ್ತು ರಕ್ತಹೀನತೆಯಿಂದ 100 ಕ್ಕೆ 42 ಮಹಿಳೆಯರು ಬಳಲುತ್ತಿದ್ದಾರೆ. ಅವರಲ್ಲಿ ಉದ್ಯೋಗಸ್ಥ ವಿದ್ಯಾವಂತರು ಹೆಚ್ಚೆಂದರೆ ಆಶ್ಚರ್ಯವಲ್ಲ, ದಿಗ್ಭ್ರಮೆಯಾಗುತ್ತದೆ. ಬೇರೆ ದೇಶಕ್ಕೆ ಹೋಲಿಸಿದರೆ ನಮ್ಮ ಮಹಿಳೆಯರ ಆಯಸ್ಸು ತೀರಾ ಕಡಿಮೆ.


ಮಹಿಳೆಯರು ಗರ್ಭಧಾರಣೆ, ಬಾಣಂತಿತನ, ತಾಯ್ತನ ಮುಂತಾದವುಗಳಲ್ಲಿನ ಭಾಗವಾಗುವುದರಿಂದ ಅವರಿಗೆ ಹೆಚ್ಚಿನ ರಕ್ಷಣೆ ಹಾಗೂ ಆಸಕ್ತಿ ತೋರಿಸ ಬೇಕೆಂಬುದು ಆರೋಗ್ಯ ಇಲಾಖೆಯ ಆಶಯ. ಹೀಗಾಗಿ ಪ್ರತಿ 700 ವಸತಿಗಳ ಪ್ರದೇಶಕ್ಕೊಂದು ಅಂಗನವಾಡಿ ಕೇಂದ್ರಗಳು ಸ್ಥಾಪಿತವಾದವು. 20-25 ಅಂಗನವಾಡಿ ಆರೋಗ್ಯ ಕೇಂದ್ರಕ್ಕೆ ಒಬ್ಬ ಮೇಲ್ವಿಚಾರಕಿ ಇರುತ್ತಾಳೆ. ಅವರಿಗೆ ಮಕ್ಕಳ ಹಾಗೂ ಗರ್ಭಿಣಿಯರ ಆರೈಕೆ, ಚುಚ್ಚುಮದ್ದು, ಅಪೌಷ್ಟಿಕತೆಯ ಬಗ್ಗೆ, ಕುಟುಂಬ ಕಲ್ಯಾಣದ ಹಾಗೂ ಬಾಣಂತಿ ಸೇವಾ ಕಾರ್ಯಗಳು ಮುಖ್ಯವಾಗಿರುತ್ತವೆ. 1987 ರಲ್ಲಿ ಸುರಕ್ಷಿತ ತಾಯ್ತನ, ಸಾರ್ವತ್ರಿಕ ಲಸಿಕೆ ಕಾರ್ಯಕ್ರಮವು ವಿಶ್ವ ಆರೋಗ್ಯಸಂಸ್ಥೆಯ ಜೊತೆ ಆರಂಭವಾಯಿತು. ಇದರಿಂದ ಪೋಲಿಯೋ ನಿರ್ಮೂಲನ ಕಾರ್ಯ ಆರಂಭವಾಯಿತು. ಯಶಸ್ವಿಯಾಗುತ್ತಿದೆ. ಇದರ ಪ್ರಚಾರಕ್ಕಾಗಿ ಸರ್ಕಾರವು ಸಮೂಹ ಮಾಧ್ಯಮಗಳನ್ನು ಬಳಸಿಕೊಂಡು ಕುಗ್ರಾಮದವರಿಗೂ ವಿಷಯ ತಿಳಿಸುವ ಪ್ರಯತ್ನ ಮಾಡಿತು.

1997ರಲ್ಲಿ ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಕಾರ್ಯಕ್ರಮ, ಗರ್ಭಿಣಿಯರು-ಹದಿಹರೆಯದವರ ಆರೋಗ್ಯ, ನವಜಾತ ಶಿಶುಗಳ ಆರೋಗ್ಯದ ಬಗ್ಗೆ ತೀವ್ರ ಆಸ್ಥೆ ವಹಿಸುವಂತಾಯಿತು. ಮಹಿಳೆಯರು ಆರೋಗ್ಯ ಕೇಂದ್ರಗಳಲ್ಲಿಯೇ ಬಂದು ಹೆರಿಗೆಯನ್ನು ಮಾಡಿಸಿಕೊಂಡು ಹೋಗುವಂತೆ ಮಾಡಲು, ಸಮೂಹ ಮಾಧ್ಯಮಗಳ ಬಳಕೆಯ ಜೊತೆಗೆ ಹಣದ ಆಮಿಷವನ್ನು ಸರ್ಕಾರ ತೋರಿಸಲಾರಂಭಿಸಿತು. ಆರೋಗ್ಯ ಕೇಂದ್ರದಲ್ಲಿ ಹೆರಿಗೆ ಮಾಡಿಸಿಕೊಂಡವರಿಗೆ 700 ರೂಪಾಯಿಗಳವರೆಗೂ ಧನಸಹಾಯ ನೀಡುತ್ತದೆ. ಹಾಗೆಯೇ ಇಂದು ಜ್ವಾಲೆಯಂತೆ ಹಬ್ಬುತ್ತಿರುವ ಎಚ್.ಐ.ವಿ ಮತ್ತು ಏಡ್ಸ್ ರೋಗಗಳ ಪತ್ತೆಕಾರ್ಯ ಹಾಗೂ ಚಿಕಿತ್ಸೆಯ ಬಗ್ಗೆಯೂ ಹಣವನ್ನು ನೀರಿನಂತೆ ಸುರಿಯುತ್ತಿದೆ. ಆದರೆ ಸಾರ್ಥಕತೆ ಎಷ್ಟರ ಮಟ್ಟಿಗಿದೆ ಎಂಬುದು ದೊಡ್ಡ ಪ್ರಶ್ನೆ. ಇಷ್ಟೆಲ್ಲಾ ಮುಂದುವರೆದರೂ ಇನ್ನೂ ನಗರದ ಗ್ರಾಮೀಣ ಮಹಿಳೆಯರ ಅನಾರೋಗ್ಯ, ಸಾವು-ನೋವುಗಳು ಕಡಿಮೆಯಾಗಿಲ್ಲ ಎಂಬುದನ್ನೂ ನಾನೇ ಪ್ರತ್ಯಕ್ಷ ಕಂಡಿದೇನೆ.

ಆರೋಗ್ಯ ಇಲಾಖೆಯು ಆರಂಭಿಸಿದ ಹೊಸ ಹೊಸ ಕಾರ್ಯ ಕ್ರಮಗಳ ಹೆಚ್ಚುಹಣ ಸಮೂಹ ಮಾಧ್ಯಮಗಳು, ಸ್ವಯಂ-ಸೇವಾ ಸಂಸ್ಥೆಗಳು, ಸರ್ಕಾರಿ ಇಲಾಖೆಯಲ್ಲಿನ ಅದೇ ಇಲಾಖೆಯ ಮುಖ್ಯ ಅಧಿಕಾರಿಗಳಿಗಷ್ಟೇ ವಿನಿಯೋಗವಾಗ ತೊಡಗಿತು. ಆ ಇಲಾಖೆ ಪ್ರಚಾರಕ್ಕಾಗಿ ಸಾಕ್ಷ್ಯಚಿತ್ರಗಳು, ಕಿರುಚಿತ್ರಗಳು, ಐದು ನಿಮಿಷಗಳ ಜಾಹಿರಾತುಗಳನ್ನು ಆರಂಭಿಸಿತು. ಅವೆಲ್ಲ ಗೋಡೌನ್‌ಗಳಲ್ಲಿ ಬೂಸ್ಟ್ ಹಿಡಿದು ಬಿದ್ದಿವೆ. ಇನ್ನು ಜನರೆಲ್ಲಿ ನೋಡುತ್ತಾರೆ?

ಅತಿ ಕಡಿಮೆ ಬೆಲೆಯ ಹತ್ತಿಯಿಂದ ಹಿಡಿದು ದೊಡ್ಡ ಆಧುನಿಕ ಉಪಕರಣಗಳು ಆರೋಗ್ಯ ಕೇಂದ್ರಗಳನ್ನು ತಲುಪುವುದೇ ಇಲ್ಲ. ಹಾಸಿಗೆಗಳನ್ನು ಆಸ್ಪತ್ರೆಯು ಆರಂಭವಾದಾಗ ಹಾಕಿಸಿರುತ್ತಾರೆ. ಹರಿದು ಛಿದ್ರಛಿದ್ರವಾಗಿ ಅನೇಕ ರೋಗಿಗಳ ರಕ್ತ ಕಫ ಕೀವುಗಳ ವಾಸನೆಯಿಂದ ತುಂಬಿರುತ್ತದೆ. ಅದರಲ್ಲೇ ಹೊಸದಾಗಿ ಬರುವ ರೋಗಿಗಳಿಗೆ ಮೇಲು-ಹೊದಿಕೆಯನ್ನು ಹಾಕಿ ಮಲಗಿಸಿದಾಗ, ಬಂದ ರೋಗಿ ತನ್ನ ಕಾಯಿಲೆಯ ಜೊತೆಗೆ ಹೊಸದೊಂದು ಕಾಯಿಲೆಯನ್ನು ಮನೆಗೆ ಆರೋಗ್ಯ ಕೇಂದ್ರಗಳಿಂದ ಕಾಣಿಕೆಯನ್ನಾಗಿ ಪಡೆದುಕೊಂಡು ಹೋಗ ಬೇಕಾಗುತ್ತದೆ. ಖಾಸಗಿ ಆಸ್ಪತ್ರೆಗಳಲ್ಲಿಯಷ್ಟು ಸೌಲಭ್ಯವಿಲ್ಲದಿದ್ದರೂ ಕನಿಷ್ಟ ಸೌಲಭ್ಯ ವನ್ನಾದರೂ ಒದಗಿಸುವ ದಿನಗಳು ಬಂದಾವೆ? ■

## ಕಟ್ಟಳೆ



ಸೂರ್ಯ ಕಿರಣಗಳನ್ನೇ
ಪಕಳೆಯಾಗಿಸಿಕೊಂಡ
ಬಿಳಿ ಸೇವಂತಿಗೆ ಕಂಡು
ವಿಧವೆಯೊಬ್ಬಳು
ಮೂಸಿದಳು
ಸವರಿದಳು
ಅಕ್ಕರೆಯ ಮುತ್ತು ಕೊಟ್ಟು
ಮುಡಿಗೇರಿಸಲಾರದ
ತನ್ನ ದೌರ್ಭಾಗ್ಯಕ್ಕೆ ನೊಂದು
ತನ್ನ ಮಂಚದ ಬದಿಯ
ಕಿಟಕಿಯಲಿ ಅದನಿಟ್ಟು
ನಿಟ್ಟಿಸುತ್ತಾ ನಿದ್ದೆ ಹೋದಳು
ವಿಧವೆ ಹೂ ಮುಡಿಯಬಾರದೆಂಬ
ನಿಯಮ ರೂಪಿಸಿದ
ಆ ಕ್ರೂರಿ ಯಾರೋ...?

● **ಎಸ್. ಮಾಲತಿ**, ಸಾಗರ

ಸಂವಾದ - 1

# ಮಾಗುವ ಕಾಲಕ್ಕೆ ಕಾಯುವ ಸಹನೆಯಿರಲಿ

● ಲಲಿತಾಸಿದ್ದಬಸವಯ್ಯ

ಶ್ರೀಯುತ ಸತ್ಯನಾರಾಯಣರವರು ಎತ್ತಿರುವ 'ಮಾದರಿ' ಯ ಪ್ರಶ್ನೆ ಸಹಜವಾದದ್ದೆ. ಆಧುನಿಕ ಕಾಲದ ಬೇಡಿಕೆಗೆ ತಕ್ಕಂತೆ ಹೆಣ್ಣು ಬದಲಾಗುತ್ತಿದ್ದಾಳೆ. ಈ ಬದಲಾವಣೆ ಇನ್ನೂ ನಡೆಯುತ್ತಿದೆ. ಬದಲಾದ ಕಾಲಮಾನಕ್ಕೆ ತಕ್ಕಂತೆ ತನ್ನನ್ನು ಒಗ್ಗಿಸಿಕೊಳ್ಳುವ ಮನುಷ್ಯ ಜೀವಿಯ ಚಿತ್ರಣ ಸಾಹಿತ್ಯಕ್ಕೆ ತತ್‌ಕ್ಷಣವೆ ವರ್ಗಾಯಿತಗೊಳ್ಳುವುದಿಲ್ಲ. ಯುಗಮಾನಕ್ಕೆ ಅನುಸಾರ ರೂಪುಗೊಂಡ ರಾಮನ ಪಾತ್ರ ಋಷಿ ವಾಲ್ಮೀಕಿಯ ಬರಹಕ್ಕೆ ಸೇರುವ ಹೊತ್ತಿಗೆ ಸಮಾಜದ ಕುಲುಮೆಯಲ್ಲಿ ಅನೇಕ ಪರೀಕ್ಷೆಗಳಿಗೆ ಒಳಗಾಗಿ ಅಂತಹ ನೂರಾರು ಸಾವಿರಾರು ವ್ಯಕ್ತಿತ್ವಗಳು ಬಂದುಹೋಗಿ ಒಂದೊಂದು ವ್ಯಕ್ತಿತ್ವವೂ ಒಂದೊಂದು ದಿಸೆಯಲ್ಲಿ ಪರಿಪೂರ್ಣವಾಗುವ ಹಾದಿ ಹಿಡಿದು, ಇಂತಹ ಅನೇಕ ವ್ಯಕ್ತಿತ್ವಗಳನ್ನು ನೋಡುತ್ತ ನೋಡುತ್ತ ಬರಹಗಾರ ತನ್ನೊಳಗೆ ಹಲವು ವ್ಯಕ್ತಿತ್ವಗಳ ಏಕರೂಪವಾಗಿ ಒಂದು ಪಾತ್ರವನ್ನು ಕಲ್ಪಿಸಿ ಸಾಹಿತ್ಯಕ್ಕೆ ಪ್ರವೇಶ ಕೊಡಿಸುತ್ತಾನೆ.

ಸದ್ಯದಲ್ಲಿ ಎತ್ತಿರುವ ಮಾದರಿ ಹೆಣ್ಣಿನ ವ್ಯಕ್ತಿತ್ವವೂ ಕೂಡ ರೂಪುಗೊಳ್ಳುತ್ತಿದೆ. ಮೇಲೆ ಹೇಳಿದ ಹಾಗೆ ಅನೇಕ ಸ್ತ್ರೀ ವ್ಯಕ್ತಿತ್ವಗಳು ಕಟ್ಟಡದ ನಾನಾ ಹಂತದಲ್ಲಿವೆ. ಇವೆಲ್ಲವೂ ಸಂಕಲನಗೊಂಡು ಮಾದರಿಯೊಂದು ಸೃಷ್ಟಿಯಾಗುತ್ತಿದೆ. ಸಮಾಜದ ಹೊಟ್ಟೆಯಲ್ಲಿರುವ ಈ ಮಾದರಿಯು ಸಾಹಿತ್ಯಕ್ಕೂ ಪ್ರವೇಶಿಸುವ ದಿನ ದೂರವಿಲ್ಲ. ಅಂತಹ ಆರಂಭಿಕ ಪ್ರಯತ್ನಗಳು ನಡೆದಿವೆ. ಇದರ ವಿವರಗಳನ್ನು ಚಂದ್ರಿಕಾರವರು ಚೆನ್ನಾಗಿಯೇ ಕೊಟ್ಟಿದ್ದಾರೆ.

ಒಂದು ಮಾತನ್ನು ದಯವಿಟ್ಟು ಗಮನಿಸಿ, ಇದು ಹಿರಿಯರಾದ ಸತ್ಯನಾರಾಯಣರಿಗೆ ತಿಳಿಯದ ವಿಷಯವೇನಲ್ಲ. ಅದೆಂದರೆ ಸ್ತ್ರೀ ಬೆಳವಣಿಗೆಯ ಅವಧಿ ಎಷ್ಟು ಮಹಾ ದೊಡ್ಡದು? ಆಧುನಿಕ ಶಿಕ್ಷಣವೆಂಬುದು ಸಮಗ್ರ ದೇಶದ ಹೆಣ್ಣುಮಕ್ಕಳಿಗೆ ಲಭ್ಯವಾದದ್ದು ಯಾವಾಗ, ಕೇವಲ ಇಪ್ಪತ್ತೈದು ವರ್ಷಗಳ ಹಿಂದೆ. ಅಪವಾದವಾಗಿ ನಗರಪ್ರದೇಶಗಳಲ್ಲಿ ಕೆಲವು ಕುಟುಂಬಗಳಲ್ಲಿ ಅಲ್ಲಲ್ಲಿ ಆಧುನಿಕ ಶಿಕ್ಷಣ ಪಡೆದ ಹೆಣ್ಣುಮಕ್ಕಳು ಇರಬಹುದು. ಆದರೆ ಮನೆಗೊಬ್ಬ ಎಸೆಲ್ಸಿ ಮಾಡಿರುವ ಹುಡುಗಿ ಕಂಡುಬಂದದ್ದು ಎಪ್ಪತ್ತರ ದಶಕದಲ್ಲಿ. ಇನ್ನು ಮನೆಗೊಬ್ಬ ಪದವೀಧರೆ ಹಳ್ಳಿಗಳಲ್ಲಿ ಕಂಡುಬಂದದ್ದು ತೀರಾ ಹತ್ತುವರ್ಷದ ಕೆಳಗೆ. ಅದೂ ಎಲ್ಲಾ ವರ್ಗಗಳಲ್ಲಿ, ಜಾತಿಗಳಲ್ಲಿ ಅಲ್ಲ. ಅಂದರೆ ಆಧುನಿಕ ಕಾಲದ ಒತ್ತಡಗಳಿಗೆ ಮೈದೆರೆದುಕೊಳ್ಳುವ ಒಂದು ದೊಡ್ಡ ಸ್ತ್ರೀ ಸಮೂಹ ತಯಾರಾಗುತ್ತಿರುವುದು ಇತ್ತೀಚೆಗೆ. ಮತ್ತೂ ಹೇಳುತ್ತೇನೆ, ಇದು ಸಮಗ್ರ ದೇಶವನ್ನು ಕಣ್ಣಮುಂದಿಟ್ಟುಕೊಂಡು ಹೇಳುತ್ತಿರುವ ಮಾತು. ಅಪವಾದಗಳನ್ನು ಹಿಡಿದುಕೊಂಡು ವಾದ ಮಾಡುತ್ತ ಹೋಗುವುದು ವಿತಂಡವಾಗುತ್ತದೆ. ಒಬ್ಬ ಇಂದಿರಾಗಾಂಧಿಯ ನಂತರ ಮತ್ತೊಬ್ಬ ಮಾಯಾವತಿ ರೂಪುಗೊಳ್ಳುವ ನಡುವೆ ಕನಿಷ್ಠ ಐವತ್ತು ವರ್ಷಗಳಿವೆ.

ಇದನ್ನು ಮನಸ್ಸಿನಲ್ಲಿಟ್ಟುಕೊಂಡು ಯೋಚಿಸಿದರೆ ಅರಿವಾಗುತ್ತದೆ ಮಾದರಿ ಹೆಣ್ಣು ಪಾತ್ರ ಇನ್ನೂ ಕುಲುಮೆಗಳನ್ನು ಹಾದು ಬರುತ್ತಿದೆ ಎಂಬುದು. ಈ ಕುಲುಮೆಗಳ ಕಾವಲ್ಲಿ ಗಟ್ಟಿಗೊಂಡು ಹೊರಬೀಳುವ ಅನೇಕ ಮೂರ್ತಿಗಳ ಒಂದೊಂದು ಉತ್ತಮಿಕೆಯನ್ನು ಆರಿಸಿಕೊಂಡು ರೂಪುಗೊಳ್ಳುವ ಅದ್ಭುತ ಆಧುನಿಕ ಮಾದರಿಯೊಂದು ಸಾಹಿತ್ಯದಲ್ಲಿ ಪ್ರವೇಶ ಪಡೆಯುವ ಕಾಲ ಬಂದೇ ಬರುತ್ತದೆ. ಅದುವರೆಗೂ ಕಾಯುವ ವ್ಯವಧಾನ ಇರಲಿ. ಬರವಣಿಗೆಯ ಮೇಲೆ ದಿಬ್ಬ ಒಡ್ಡಬೇಡಿ. ಒಡ್ಡುವ ದಿಬ್ಬವನ್ನು ಸ್ವೀಕರಿಸಲು ಕೂಡ ಅನೇಕ ಸಿದ್ಧತೆಗಳು ಬೇಕಾಗುತ್ತವೆ.

ಸಿದ್ಧತೆಗಾಗಿ ಎಷ್ಟು ಸಮಯ ನಮಗೆ, ಲೇಖಕಿಯರಿಗೆ ದಕ್ಕಿದೆ? ಆಧುನಿಕ ಶಿಕ್ಷಣ ದೊರೆತಿದ್ದೇ ತಡವಾಗಿ. ತದನಂತರ ಬರವಣಿಗೆಯಲ್ಲಿ ಅನೇಕ ಅನುಭವ ತಳಗಳಿಂದ ಬಂದ ಹೆಣ್ಣುಗಳು ತೊಡಗಿಸಿಕೊಂಡಿದ್ದು ಇನ್ನೂ ತಡವಾಗಿ. ಹೀಗೆ ತೊಡಗಿಸಿಕೊಂಡವರ ಮುಂದಿದ್ದ ಮಾದರಿಗಳೂ ಕೂಡ ಅಪಸವ್ಯದವು. ಇಂಗ್ಲಿಷಿನಿಂದ ಭಾವನೆ ಚಿಂತನೆಗಳ ಸಮೇತ ಕನ್ನಡಕ್ಕಿಳಿದ ಗದ್ಯಪದ್ಯಗಳೇ ನಮ್ಮ ಕೈಗೆ ಥಟ್ಟನೆ ಸಿಕ್ಕದ್ದು. ಈ

---

**ಕಳೆದ ಸಂಚಿಕೆಯಲ್ಲಿ ಪ್ರಕಟವಾದ ಸ್ತ್ರೀ ಸಾಹಿತ್ಯದಲ್ಲಿ 'ಮಾದರಿ'ಗಳು ಕುರಿತ ಲೇಖನಗಳಿಗೆ ಸಾಕಷ್ಟು ಪ್ರತಿಕ್ರಿಯೆಗಳು ಬಂದಿವೆ. ಕೆಲವನ್ನು ಇಲ್ಲಿ ಪ್ರಕಟಿಸಿದ್ದೇವೆ.**
**-ಸಂ**

---

ಆಮದುಗೊಂಡ ಮಾದರಿಗಳನ್ನು ಅನುಸರಿಸಿದ ಲೇಖಕಿಯರು ಅದರಿಂದ ಹೊರಬಂದು ತಮ್ಮದೇ ಸ್ವಂತ ಚಿಂತನೆ, ಭಾಷೆ, ಶೈಲಿಗಳನ್ನು ಈಗ ಸಿದ್ಧಿಸಿಕೊಳ್ಳುತ್ತಿದ್ದಾರೆ. ದೇಸಿತನ ಈಗ ನಿಜವಾದ ಅರ್ಥದಲ್ಲಿ ಫಲಕೊಡುತ್ತಿದೆ. ಇಂತಹ ಸಾಹಿತ್ಯಿಕ ಆವರಣವನ್ನು ತಾನೇ ನಿರ್ಮಿಸಿಕೊಂಡಿರುವ ಲೇಖಕಿ ಮಾದರಿ ಪಾತ್ರಗಳನ್ನು ಸೃಷ್ಟಿಸುವ ದಿನ ದೂರವೂ ಇಲ್ಲ ; ದುಸ್ಸಾಧ್ಯವೂ ಅಲ್ಲ. ಒಂದು ವೇಳೆ ಇದರಲ್ಲಿ ನಿಧಾನವಿದೆ ಎನ್ನಿಸುವುದಾದರೆ ಅದಕ್ಕೆ ಕಾರಣ ವಿಪರೀತಗಳ ಹೇರಳ ಮಾದರಿಗಳನ್ನು ಒದಗಿಸಿದ ಪುರುಷ ನಿರ್ಮಿತ ಸಾಹಿತ್ಯವೇ. ನನ್ನ ಸ್ವಭಾವಕ್ಕೆ ಒಗ್ಗದ ಇಂತಹ ಆರೋಪಗಳನ್ನು ಇಲ್ಲಿ ಹೇಳುವುದು ಅನಿವಾರ್ಯವಾಗಿದೆ.

ಇದೇ ವಿಷಯವಾಗಿ ಬರೆದ ಪದ್ಯವೊಂದನ್ನು ಓದುಗರ ಮುಂದಿಟ್ಟಿದ್ದೇನೆ. ಇದಕ್ಕೆ ಪ್ರೇರಣೆ ಬೆಂಗಳೂರು ನಗರದಲ್ಲಿ ಗಾರ್ಮೆಂಟುಗಳಿಂದ ಐ.ಟಿ.ವರೆಗೆ ದುಡಿಯುತ್ತಿರುವ ಸಾವಿರಾರು ಹೆಣ್ಣುಮಕ್ಕಳು. ಈ ಹುಡುಗಿಯರೆಲ್ಲ ಬೆಂಗಳೂರಿಗೆ ಬಂದು ಸೇರಿರುವುದು ನೂರಾರು ಹಳ್ಳಿಗಳಿಂದ...... ■

---

*ಮಾನಸ ವಿಚಾರಪೂರ್ಣವಾಗಿದೆ. ಅಕ್ಟೋಬರ್ ಮಾನಸದ ಸಂಪಾದಕೀಯದಲ್ಲಿ ಪ್ರಸ್ತಾಪಿಸಲಾದ ಹೆಣ್ಣುಭ್ರೂಣ ಹತ್ಯೆಯ ವಿಷಯ ಗಂಭೀರವಾದದ್ದು. ಈ ಕುರಿತು ಸಮಾಜದಲ್ಲಿ ಜಾಗೃತಿ ಮೂಡಬೇಕಾದ್ದು ಇವತ್ತಿನ ಅಗತ್ಯವಾಗಿದೆ. ಪತ್ರಿಕೆ ಈ ಕುರಿತು ಕಿಡಿ ಹೊತ್ತಿಸಿದೆ. ಮುಂದೆ ಸಾಗಲಿ.*
*ಬಂದಗದ್ದೆ ರಾಧಾಕೃಷ್ಣ, ಬಂದಗದ್ದೆ.*



## ಹೊಸ ಪದ್ಯ

ಈ ಕತೆಯಲ್ಲೂ
ಒಂದೂರ ದೊರೆಗೊಬ್ಬಳೇ ಮಗಳು

ಸ್ವಂತನಗು ಮರೆತು ನಗಿಸುವನು ಬರಲೆಂದು ಎದುರು ನೋಡುತ್ತಿಲ್ಲ ಇವಳು
ಏಳುಪ್ಪರಿಗೆ ಮೇಲಿಂದ ನೀಳಕೇಶವ ಬಿಟ್ಟು ಪಗಡೆ ಆಡುತ್ತಿಲ್ಲ
ತಲೆ ಮಾಸಿದವನೊಬ್ಬ ಗಿಣಿ ಮಾಡಿವಳ ಮುಂಗೈ ಮೇಲೆ ಕುಣಿಸುವಂತಿಲ್ಲ
ದಿಬ್ಬಣದ ಜೊತೆ ಬರುವ ಖಡ್ಗಕ್ಕೆ ಧಾರೆ ಹುಯ್ಯಿಸಿಕೊಳ್ಳುವುದಿಲ್ಲ
ಉಣ್ಣುವ ಬಾಯಿಗೆ ಕುಕ್ಕೆಯಿಟ್ಟು ಏಳುಮಲ್ಲಿಗೆ ತೂಕ ಕಾಯ್ದುಕೊಳ್ಳುವುದಿಲ್ಲ

**ಈ ಹುಡುಗಿ**
ಹೊಸಪದ್ಯ , ನುಡಿಗಟ್ಟಿನ ಮರ್ಯಾದೆ ಮೈತುಂಬ ಹೊದ್ದುಕೊಂಡೂ
ಜಿಗಿಯಬಲ್ಲಳು ಆಕರ್ಷಣೆಗಳ ದಾಟಿ ವ್ಯೋಮವಿಸ್ತಾರಕ್ಕೆ ಚಾಚಿ
ನಿರ್ವಹಿಸಬಲ್ಲಳು ನಿರ್ವಾತದ ಒತ್ತಡ ಸ್ತ್ರೀದೇಹದ ಇತ್ತಂಡ
ಚಲಾಯಿಸಬಲ್ಲಳು ನುರಿತ ವ್ಯವಹಾರ, ಸಲ್ಲದೆಡೆ ಔದಾಸೀನ್ಯ

**ಈ ಹುಡುಗಿಗೆ ಗೊತ್ತು**
ತನ್ನ ಕರಗಳನ್ನು ತನ್ನ ಉನ್ನತಿಗೆ ಒಗ್ಗಿಸುವ ಕುಶಲಕಲೆ
ಮಿದುಳ ಮಡಿಕೆಗಳ ಕೆದಕಿ ಒಲಿಸಿಕೊಳ್ಳುವ ಹಠತಂತ್ರಜ್ಞೆ
ಬೇಕಾದ ಸಂಗತಿಗೆ ಒಂದು ಪುಸ್ತಕಕೆ ಹತ್ತು ಕಡೆ ಅಲೆದು
ದುಡಿಯುತ್ತಾಳೆ ಸೋಗುಮೀಸಲಿನ ಮಸೂದೆ ಹಂಗುದೊರೆದು

**ಈ ಹುಡುಗಿ ಇದಲ್ಲ, ಇದಲ್ಲ**
ಸೂಕ್ಷ್ಮ ತರಂಗಾಂತರಕೆ ಕಿವುಡಿಯಲ್ಲ ಗರ್ಭಕೋಶವ ಕುಯ್ದಿಟ್ಟಿಲ್ಲ
ಹಾಲುದುಂಬಿದ ಮೊಲೆಗಳನ್ನು ನಾಡಿಮೂಲದಲಿ ಹಿಂಗಿಸುವುದಿಲ್ಲ
ಭೃಂಗದ ಬೆನ್ನೇರಿ ಬರುವ ಕಲ್ಪನಾವಿಲಾಸಕ್ಕೆ ಕದ ಜಡಿದಿಲ್ಲ
ಭರತೇಶ ವೈಭವದ ಸಹಪಂಕ್ತಿ ಭೋಜನಕೆ ನಿಂತ ಮುಖಹೀನೆಯಲ್ಲ

**ಈ ಹುಡುಗಿ ಹೆಣಗುತ್ತಾಳೆ**
ಪರಾಕುಗಳಲಿ ಕೆತ್ತಿರುವ ಪ್ರಮಾಣಬದ್ಧದ ಪ್ರತಿಮೆ ಕೆಡಿಸುವುದಕ್ಕೆ
ರಿಯಾಯಿತಿ ಬಟ್ಟುಗಳಲಿ ತೂಗಲ್ಪಡುವ ವಾಮಭಾಗದ ರದ್ದತಿಗೆ
ಆತ್ಮಸಂಧಾನಕ್ಕೆ ಅವನುಂಟು ಇವುನುಂಟೆಂಬ ಸುಳ್ಳು ಸಮಾಧಾನ
ಗಳ ನಿಷೇಧಕ ಇಬ್ಬಂದಿ ಸಿದ್ಧಾಂತಗಳ ಕೆಸರುದಾರಿಯ ನಾಕಾಬಂದಿಗೆ

**ಈ ಹುಡುಗಿ ಹೀಗೆ**
ನಮ್ಮ ಮನಮೃತ್ತಿಕೆಯಿಂದ ಸೃಷ್ಟಿಗೊಂಡಿರುವ ಮೃಣ್ಮಯಿ
ನಮ್ಮೆಷ್ಟೋ ದಿನಗಳ ಹಗಲಹಂಬಲ ಇರುಳ ಕನವರಿಕೆಯ ಹಣ್ಣು
ಯಾವ ದೇವಿಯ ವರಪ್ರಸಾದವೂ ಅಲ್ಲ ಸಹಜಕೃಷಿಯ ಪೈರು
ಇವಳು ಗೆಲ್ಲುತ್ತಾಳೆ ಇವಳು ಗೆಲ್ಲುತ್ತಾಳೆ ಗೆಲ್ಲುತ್ತಾಳಿವಳು

● ಲಲಿತಾಸಿದ್ಧಬಸವಯ್ಯ

ಸಂವಾದ – 2

## ಇನ್ನೇಕೆ 'ಮಾದರಿ'ಗಳು

● ಡಾ॥ ಎಸ್.ವಿ. ಪ್ರಭಾವತಿ

"ನಮ್ಮ ಮಾನಸ" ಸಂಪುಟ 1 ಸಂಚಿಕೆ 6 ಅಕ್ಟೋಬರ್ 2007ರಲ್ಲಿ ಪ್ರಕಟವಾದ ಕೆ. ಸತ್ಯನಾರಾಯಣ ಮತ್ತು ಪಿ. ಚಂದ್ರಿಕ ಅವರ ಅಭಿಪ್ರಾಯಗಳಿಗೆ ಪ್ರತಿಸ್ಪಂದಿಸಿ ಈ ಕೆಲವು ಮಾತುಗಳು. ಸರಿಯಾಗಿ ಇಪ್ಪತ್ತು ವರ್ಷದ ಹಿಂದೆ "ಸ್ತ್ರೀವಾದ"(ಫೆಮಿನಿಸಮ್) ಎಂಬ ಪದವು ಆಗತಾನೇ ಕನ್ನಡ ಸಾಹಿತ್ಯಕ್ಕೆ ಕಾಲಿಡುತ್ತಿದ್ದ ಕಾಲ "ನೀವು ಮಹಿಳೆಯರಲ್ಲಿ (ಲೇಖಕಿಯರಲ್ಲಿ) ಒಬ್ಬ ಶಿವರಾಮ ಕಾರಂತ ಬರಲಿಲ್ಲ ಏಕೆ?" ಎಂದರು ವಿಮರ್ಶಕರು. "ಬಂಡಾಯ ಸಾಹಿತ್ಯದಲ್ಲಿ ಒಂದೂ ಕಲಾಕೃತಿ ಬರಲಿಲ್ಲ ಏಕೆ?" ಎಂದು ದಲಿತರು ಕೇಳಿದಂತೆ. ದಲಿತ ಸಾಹಿತ್ಯದಲ್ಲಿ ದೇವನೂರ ಮಹಾದೇವರ 'ಕುಸುಮ ಬಾಲೆ' ಇತ್ತು. ಬಂಡಾಯ ಸಾಹಿತ್ಯದಲ್ಲಿ ಅಂಥದೊಂದು ಕೃತಿ ಇರಲಿಲ್ಲ. ಬಂಡಾಯದವರು ಈ ಪ್ರಶ್ನೆಗೆ ಏನು ಉತ್ತರ ಕೊಟ್ಟರೋ ಬಿಟ್ಟರೋ ನನಗೆ ತಿಳಿಯದು. ಆದರೆ ನಾನು ಸೇರಿದಂತೆ ಕೆಲವು ಲೇಖಕಿಯರು ಮೇಲೆ ಕೇಳಿದ ಪ್ರಶ್ನೆಗೆ ಒಂದು ಉತ್ತರವನ್ನಂತೂ ಕೊಡತೊಡಗಿದೆವು, ಅದೂ ಪ್ರಶ್ನೆಯ ರೂಪದಲ್ಲಿ, "ನೀವು ಲೇಖಕರಲ್ಲಿ ಒಬ್ಬ ಎಂ.ಕೆ. ಇಂದಿರಾ ಬರಲಿಲ್ಲ ಏಕೆ? ಒಬ್ಬ ವೈದೇಹಿ ಬರಲಿಲ್ಲ ಏಕೆ?" ಎಂದು. ಅಂದರೆ ಶಿವರಾಮಕಾರಂತ ಶ್ರೇಷ್ಠ, ವೈದೇಹಿ, ಎಂ.ಕೆ.ಇಂದಿರಾ ಶ್ರೇಷ್ಠ ಅಲ್ಲ ಎನ್ನುವ ಆ ಅವರ ಪರಿಕಲ್ಪನೆಯನ್ನೇ ಬುಡಮೇಲು ಮಾಡುವ ಕಾರ್ಯಕ್ಕೆ ತೊಡಗಿದೆವು. ಮೂಲತಃ ಶಿವರಾಮ ಕಾರಂತರಂತೆ ಒಬ್ಬ ಲೇಖಕಿ ಬರೆಯಬೇಕೆಂದು ಆಶಿಸುವುದೇ ತಪ್ಪು. ಆದರೂ ಕುವೆಂಪು, ಕಾರಂತ ಇಬ್ಬರನ್ನೂ ಒಟ್ಟಿಗೆ ನೆನಪಿಸುವ ನಾಗವೇಣಿ ಬಂದರು. ಆ ವಿಷಯ ಬಿಡಿ, 'ಫಣಿಯಮ್ಮ'ನ ಅನುಭವಗಳು ಒಬ್ಬ ಲೇಖಕನ ಅನುಭವಗಳಾಗಬಲ್ಲವೆ? "ಗಜ್ಜೆಪೂಜೆ"ಯ ಚಂದ್ರಾ ಅನುಭವಸಿದ ವೇದನೆಗಳೂ, "ಹೂವು ಹಣ್ಣು"ವಿನ ರಮಾ ಅನುಭವಿಸಿದ ವೇದನೆಗಳೂ, ಅ.ನ.ಕೃ ಅವರ 'ಶನಿ ಸಂತಾನ', 'ಸಂಜೆಗತ್ತಲು', 'ನಗ್ನ ಸತ್ಯ' ಎಂಬ ಸರಣಿ ಕಾದಂಬರಿಗಳ ವೇಶ್ಯೆಯರ ರೀತಿ ನೀತಿಗಳೂ ಒಂದೇ ಆಗಿವೆಯೆ? (ಅ.ನ.ಕೃ ಅವರ ಬಗ್ಗೆ ನನಗೆ ತುಂಬಾ ಗೌರವವಿದೆ) ಸ್ತ್ರೀವಾದದ ಪರಿಣಾಮವೆಂದರೆ ಲೇಖಕರು ಬರೆದ ರೀತಿಯಲ್ಲೇ ಲೇಖಕಿಯರು ಬರೆಯುತ್ತಿದ್ದುದು ಬದಲಾಗಿ, ತಮ್ಮ ಮನಸ್ಸಿನ ಭಾವನೆಗಳನ್ನು ಬಿಚ್ಚಿಡ ತೊಡಗಿದ, ಲೈಂಗಿಕ ಶೋಷಣೆಗೆ ಬದಲಾಗಿ ಲೈಂಗಿಕ ಆಯ್ಕೆ ಬಂದದ್ದು, ಅನೂಹ್ಯ ಜಗತ್ತೊಂದರ ಅನಾವರಣವಾಗಿದ್ದು, ದಲಿತಲೋಕ, ಸ್ತ್ರೀಲೋಕ, ಮುಸ್ಲಿಂ ಲೋಕದ ಅನಾವರಣವಾಗಿದ್ದು, ಬಹುಮುಖ್ಯವಾಗಿ ಸ್ತ್ರೀವಾದ ಎಂಬ ಪದ ಚಾಲ್ತಿಗೆ ಬಂದನಂತರ ಲೇಖಕರು ಬರೆಯುವ ರೀತಿಯೇ ಬದಲಾಗಿದೆ. ಇನ್ನೇನು ಬೇಕು? ಇನ್ನೇಕೆ ಮಾದರಿಗಳು? ಇನ್ನೇಕೆ ಹುಡುಕಾಟ? ಸ್ತ್ರೀವಾದ ಎಂಬ ಪದ ಹುಸಿ ಹೋಗಲಿಲ್ಲ. ನಮಗಷ್ಟೇ ಸಾಕು. ■

ಸಂವಾದ – 3

# ಸ್ವಾತಂತ್ರ್ಯ ಮತ್ತು ಕಡಲೆಬೀಜ

● ಬಂದಗದ್ದೆ ರಾಧಾಕೃಷ್ಣ

**ಕೆ.** ಸತ್ಯನಾರಾಯಣರು ಬರೆದ (ನಮ್ಮ ಮಾನಸ, ಅಕ್ಟೋ 2007, ಸಂಚಿಕೆ 6 ರಲ್ಲಿ) "ಹೊಸಕಾಲದ ಬರಹಗಾರ್ತಿಯರಿಂದ 'ಮಾದರಿ'ಗಳು ಇನ್ನೂ ಬಂದಿಲ್ಲ" ಎಂಬ ಲೇಖನದಲ್ಲಿ ಕುವೆಂಪು, ಕಾರಂತರು ತಮ್ಮ ಹೂವಯ್ಯ, ಗುತ್ತಿ, ರಾಮ, ಲಚ್ಚ ಇಂತಹ ಪಾತ್ರಗಳ ಮೂಲಕ ಹೊಸಕಾಲದಲ್ಲಿ ನಿರ್ಮಾಣವಾಗುವ ವ್ಯಕ್ತಿಗಳ ರೂಪರೇಷೆಯ ಮುಂಗಾಣ್ಕೆಯನ್ನು ನಮಗೆ ಕೊಟ್ಟರು ಎನ್ನುವುದು ಗಮನಾರ್ಹ ಹೇಳಿಕೆ. ಆದರೆ ಲೇಖನದ ಮುಂದಿನ ಭಾಗಗಳಲ್ಲಿ ಸ್ತ್ರೀಯರ ಕಥಾಲೋಕದಲ್ಲಿ ಇಂಥಾ ಪಾತ್ರಗಳು ಮೂಡಿಬಂದಿಲ್ಲವೇಕೆ ಎಂಬ ಹಳಹಳಿಕೆ ಇದೆ.

ನಿರೀಕ್ಷೆ ಮತ್ತು ನಿರೀಕ್ಷೆಯ ಮಟ್ಟಕ್ಕೆ ಏರಲಾರರು ಎಂಬ ವಿಮರ್ಶೆ ಈ ಲೇಖನದ ಎತ್ತರವನ್ನು ಕುಗ್ಗಿಸಿದೆ. ಗಂಡ, ಮಗು, ಸಂಘಟನೆ– ಈ ಎಲ್ಲಾ ಕೆಲಸಗಳ ಒತ್ತಡದ ನಡುವೆಯೂ ಪತ್ರಿಕೆ ಪ್ರಕಟಿಸುತ್ತಿದ್ದ ಹೆಣ್ಣನ್ನು ಹೊಗಳಿದಾಗ "ನಾನು ನಿಮ್ಮ ಕುಟುಂಬದ ಸದಸ್ಯೆಯಾಗಿದ್ದರೂ ಹೀಗೇ ಹೊಗಳುತ್ತಿದ್ದಿರಾ? ಹೀಗೆ ಬೆಳೆಯುವ ಅವಕಾಶಗಳು ನಿಮ್ಮ ಕುಟುಂಬದಲ್ಲಿ ಇರುತ್ತಿತ್ತಾ?" ಈ ರೀತಿಯ ತಿರುಗೇಟು ಲೇಖನದ ಯಶಸ್ಸು.

ಅಹಂಕಾರವೇ ಇಲ್ಲವೆನ್ನುವ (ಸುಳ್ಳು ಹೇಳುವ) ಗಂಡಸಿಗೂ ಈ ಪ್ರಶ್ನೆಯನ್ನು ಜೀರ್ಣಿಸಿಕೊಳ್ಳುವುದು ಕಷ್ಟವೇ.

ಸಂಸಾರ ನಡೆಸುವ ಕಷ್ಟಗಳು ಮತ್ತು ಈ ಕಥಾವಸ್ತುವನ್ನೇ ಕಲೆಯಾಗಿ ಕಟ್ಟುವುದು ಈ ಎರಡೂ ಹೋಲಿಕೆಗೆ ನಿಲುಕುವುದಿಲ್ಲ. ಕಷ್ಟ ಕಲೆಯಾಗುವಾಗ ಆನಂದದ ಕಡೆ ತಿರುಗಿರುತ್ತದೆ. ಹೆಣ್ಣು ಸಂಸಾರದ ನೋವಿನಿಂದ ಒಳಗೊಳಗೇ ನವೆಯುವುದು, ಗಂಡು ಕುಡಿದು ತೂರಾಡಿ ಮಾನಗೇಡಿಯಾಗುವುದು ಅಥವಾ ಹೆಂಡತಿ, ಮಕ್ಕಳನ್ನು ಹೊಡೆದು ಬಡಿದು ಅಮಾನವೀಯ, ಒರಟ ಮುಂತಾದ ಪದವಿಗಳಿಸುವುದರ ಹಿಂದೆ ಸಿಟ್ಟು, ನೋವು ಪ್ರಮುಖವಾಗಿದೆ. ಇಲ್ಲಿ ಸರಿತಪ್ಪುಗಳ ತೀರ್ಮಾನಕ್ಕಿಂತ ಸಂಕೀರ್ಣತೆ ಸಾಧಿಸುವ ಕಲೆಗಾರಿಕೆ ಅಗತ್ಯವಾಗಿದೆ. ಸಾಹಿತ್ಯ ಚರಿತ್ರೆಯ ನೆಲೆಯಿಂದ ಕೆ.ಸತ್ಯನಾತಾಯಣರು ಹೀಗೆ ದೃಷ್ಟಿ ಬೀರುವುದು ಸರಿಯಾದರೂ 'ಮಾದರಿ'ಯ ನಿರೀಕ್ಷೆ ಸರಿಯೆನಿಸುತ್ತಿಲ್ಲ.

ಹೆಣ್ಣಿನ ಚಿತ್ರಣವೆಂದರೆ ಸದಾ ಅಳು, ಬಿಡುವಿಲ್ಲದ ಮನೆಗೆಲಸ, ಗಂಡನಿಂದ ಹೊಡೆತ, ಇಲ್ಲವೇ ನೋವಾಗುವಂತಹ ಮಾತುಗಳು, ಮಗುವಿನ–ಹಿರಿಯರ ಲಾಲನೆ, ಪಾಲನೆ ಇಷ್ಟೇನಾ? ಗಂಡ, ವಿದ್ಯಾಭ್ಯಾಸ, ಸ್ನೇಹಿತೆಯರು, ವಿಹಾರ, ಕೆಲಸ, ಪ್ರೀತಿ, ಸ್ವಾತಂತ್ರ್ಯ– ಈ ಮಗ್ಗಲುಗಳಲ್ಲೂ ಅವಳ ಬದುಕಿದೆ ಆನಂದವಿದೆ. ಅಮೃತಾ ಪ್ರೀತಮರು ಇವನ್ನೆಲ್ಲಾ ಮೇಳೈಸಿ ಕರುಳು ಮಿಡಿಯುವ ಹಾಗೆ ಬರೆಯುವುದರ ಹಿನ್ನೆಲೆಯಲ್ಲಿ ಅನುಭವ ಮತ್ತು ಕಲೆಗಾರಿಕೆಯ ಕೌಶಲ ಕಾಣುವುದು.

ಕೆ. ಸತ್ಯನಾರಾಯಣರ ಲೇಖನಕ್ಕೆ ಪ್ರತಿಸ್ಪಂದಿಯಾಗಿ ಡಾ. ಪಿ. ಚಂದ್ರಿಕಾ "ಈಗ ಬೇಕಿರುವುದು 'ಮಾದರಿ'ಯಾಗಬಲ್ಲ ಹೆಣ್ಣಿನ ಚಿತ್ರಣವಲ್ಲ" ಲೇಖನದಲ್ಲಿ ನಿರೀಕ್ಷೆ ಎಷ್ಟೋ ವೇಳೆ ಇರುವ ಸ್ಥಿತಿಯನ್ನು ಮರೆಸುತ್ತದೆ. ನಿರೀಕ್ಷೆಯೇ ಮುಖ್ಯವಾಗಿ ಅಲ್ಲೇನು ನಡೆದಿದೆ ಎನ್ನುವುದು ಮರೆಯಾಗುತ್ತದೆ ಎನ್ನುತ್ತಾರೆ.

ಡಾ.ಪಿ.ಚಂದ್ರಿಕಾ ಗದ್ಯ ಮತ್ತು ಪದ್ಯ ಪ್ರಕಾರಗಳಲ್ಲಿ ಮಹಿಳೆಯರು ಕಲಾಕೌಶಲ ಕಾಣಿಸಿದ ರೀತಿಯನ್ನು ಸೂಕ್ಷ್ಮಮತಿಗಳಾಗಿ ಬೇರ್ಪಡಿಸಿ ನೋಡುತ್ತಾರೆ. ದೇವರನ್ನೇ ಗಂಡನನ್ನಾಗಿ ಕಾಣುವ ಅಕ್ಕ ಮತ್ತು ಅಕ್ಕನ ಮಾದರಿಯನ್ನು ಮುಂದುವರೆಸಿ ಬರೆಯುತ್ತಿರುವ ಮುಕ್ತಾಯಕ್ಕೆ, ಪ್ರತಿಭಾ ನಂದಕುಮಾರ್‌ರಂಥ ಲೇಖಕಿಯರು ಕನ್ನಡಕ್ಕೆ ನೀಡಿದ ಕಾಣ್ಕೆ ಸಣ್ಣದಲ್ಲ.

ನಿನಗೆ ಸ್ವಾತಂತ್ರ್ಯ ಕೊಟ್ಟಿದ್ದೇನೆ. ಏನೂ ಮಾಡಲು ಶಕ್ತಳಿದ್ದೀಯ – ಎಂದು ಹೆಂಡತಿಗೆ ಗಂಡ ಹೇಳಿದಾಗ "ಹಾಗೆ ಕೊಡಲು ಸ್ವಾತಂತ್ರ್ಯವೇನು ಕಡಲೇಬೀಜವೇ?" – ಎಂದು ಹೆಂಡತಿ ಕೇಳುವ ಪುಟ್ಟ ಕಥೆಯೊಂದನ್ನು ಡಾ.ಪಿ.ಚಂದ್ರಿಕಾ ತಮ್ಮ ಲೇಖನದ ಅಂತ್ಯದಲ್ಲಿ ನೀಡುತ್ತಾರೆ. ಸ್ವಾತಂತ್ರ್ಯ, ಸ್ತ್ರೀ ಸ್ವಾತಂತ್ರ್ಯ, ಅಹಂಕಾರ, ಪ್ರೀತಿ ಈ ಎಲ್ಲದರ ಆತ್ಮವಿಮರ್ಶೆಗೆ ಈ ಸಾಲುಗಳು ಪ್ರಮುಖವಾಗುತ್ತವೆ.

ಹೆಣ್ಣು ಹೀಗೇ ಇರಬೇಕು ಎಂದು ಬಯಸುವ ಪುರುಷರು! ಗಂಡು ಹೀಗೇ ಇರಬೇಕು ಎಂದು ಬಯಸುವ ಸ್ತ್ರೀಯರು ! ಇಬ್ಬರ ನಡುವಿನ ತಿಕ್ಕಾಟ ಸ್ತ್ರೀವಾದಕ್ಕೆ ವಸ್ತುವಲ್ಲ. ಇಲ್ಲಿ ಹಕ್ಕು ಮತ್ತು ಕರ್ತವ್ಯಗಳ ವಿಷಯವಿದೆ. ಮೇಲು, ಕೀಳು, ಮಾನ, ಅವಮಾನ ಪ್ರೀತಿ ದ್ವೇಷಗಳ ಸಂಕೀರ್ಣತೆಯಿದೆ. ಇಬ್ಬರ ಅಹಂಕಾರದ ನಡುವೆ ಸ್ವಾತಂತ್ರ್ಯದ ಅರ್ಥ ವಿವರಣೆಗಳನ್ನು ಹುಡುಕುವ, ತಿಕ್ಕಿ ತೀಡಿ ಬೆಳಕು ಕಾಣುವ ಕೆಲಸವೇ ಸಾಹಿತ್ಯವೆನಿಸುವುದು. ಕಾವ್ಯದ ಬೆಳಕೆಂದರೆ ಸಂಕೀರ್ಣತೆಯನ್ನು ಎದುರು ನಿಲ್ಲಿಸುವ ಕಲೆಯಾಗಿದೆ.

ಇವತ್ತು ವೈದೇಹಿ, ಎಚ್, ನಾಗವೇಣಿ, ಬೆಳಗಾಂವ್‌ಕರ್ ರಂತಹ ಲೇಖಕಿಯರು ಅಗದೀ ತಾಖತ್ತುಳ್ಳವರು. ಒಬ್ಬ ಲೇಖಕ ಹೆಣ್ಣನ್ನು ಎಷ್ಟೇ ಅರ್ಥೈಸಿಬರೆದರೂ, ಪರಕಾಯ ಪ್ರವೇಶಮಾಡಿ ಬರೆದರೂ ಕಾಣದ ಮಗ್ಗುಲುಗಳು. ದೃಷ್ಟಿಕೋನ ಲೇಖಕಿಯ ಬರಹದಲ್ಲಿ ಕಂಡಾಗಲೇ ಲೇಖಕಿಯ ಶಕ್ತಿ ಬೆಳಗುವುದು. ಬರೆದದ್ದು ಲೇಖಕ ಅಥವಾ ಲೇಖಕಿ ಆಗಿರಲಿ, ಓದುಗರಿಗೆ ಬೇಕಾದ್ದು ಇಂಥಾ ಫರಕು, ವಿವಿಧ ದೃಷ್ಟಿಕೋನ. ಓದುಗರಲ್ಲಿ ಲೇಖಕ, ಲೇಖಕಿ ಎಂಬ ಭೇದವಿಲ್ಲ.

ಡಾ.ಪಿ.ಚಂದ್ರಿಕಾರ ಲೇಖನದ ಶೀರ್ಷಿಕೆಯನ್ನೂ ಒಪ್ಪುತ್ತೇನೆ. ಒಳನೋಟವುಳ್ಳ ನೆಮ್ಮದಿಯ ಹುಡುಕಾಟ ಇವತ್ತಿನ ಗಂಡು, ಹೆಣ್ಣು ಇಬ್ಬರ ಅಗತ್ಯವಾಗಿದೆ. ನವತಂತ್ರಜ್ಞಾನದ ಎದುರು ಇತಿಹಾಸದ ಬಳುವಳಿಯಾದ ನಮ್ಮ ಮಿದುಳೆಂಬ ಯಂತ್ರವನ್ನು ಸುಧಾರಿಸುವ, ನಿಭಾಯಿಸುವ, ಕಾಪಾಡುವ ಕಲೆ ಸಿದ್ದಿಸಬೇಕಾಗಿದೆ. ಈ ಕೆಲಸ ಸಾಹಿತ್ಯ, ಸಂಗೀತ ಮತ್ತು ವಿಜ್ಞಾನಗಳ ಮೇಳೈಕೆಯಿಂದ ಮಾತ್ರ ಸಾಧ್ಯವೆಂದು ನಂಬಿದ್ದೇನೆ. ಇವತ್ತಿನ ಕಾಲಕ್ಕೆ ಇದರ ಸ್ವರೂಪ ಹೇಗಿದೆ?

ದೂರದರ್ಶನಗಳಲ್ಲಿ ಪ್ರಸಾರವಾಗುವ ಧಾರಾವಾಹಿಗಳು. ಚಿತ್ರಮಂದಿರಗಳಲ್ಲಿ ಪ್ರಸಾರವಾಗುವ ಸಿನೆಮಾಗಳು ಅಥವಾ ರಂಗಮಂದಿರಗಳಲ್ಲಿ ಕಾಣುವ ನಾಟಕ, ನರ್ತನಗಳು? ಅಥವಾ ಪುಸ್ತಕಗಳು?

■

# ಲಿಂಗತ್ವ (ಜೆಂಡರ್) ಎಂದರೇನು?


ಇಂಗ್ಲಿಷ್ ಮೂಲ :
ಅಂಡರ್‌ಸ್ಟ್ಯಾಂಡಿಂಗ್ ಜೆಂಡರ್

ಲೇಖಕರು : ಕಮಲಾ ಭಾಸಿನ್
ಕನ್ನಡಕ್ಕೆ : ವೆಂ. ವನಜ

*(ಹಿಂದಿನ ಸಂಚಿಕೆಯಿಂದ)*

ವಿವಿಧ ಧರ್ಮಗಳಾಧರಿತ ಪ್ರತ್ಯೇಕ ವೈಯಕ್ತಿಕ ಕಾನೂನುಗಳ ಅಸ್ತಿತ್ವ ಕೂಡ ಲಿಂಗತ್ವದ ಸಂಬಂಧಗಳನ್ನು ಪ್ರಭಾವಿಸುತ್ತದೆ. ಉದಾಹರಣೆಗೆ, ಮುಸ್ಲಿಂ ವೈಯುಕ್ತಿಕವಾದವು ವಿಚ್ಛೇದನೆಗಳ ಅವಕಾಶವನ್ನು ನೀಡುತ್ತದೆ. ಅದೇ ರೀತಿ ಕ್ರೈಸ್ತ ಕಾನೂನು ಪುರುಷನ ವಿವಾಹಬಾಹಿರ ಲೈಂಗಿಕ ಸಂಬಂಧವನ್ನು ವಿವಾಹ ವಿಚ್ಛೇದನಕ್ಕೆ ಒಂದು ಕಾರಣವನ್ನಾಗಿ ಪರಿಗಣಿಸುವುದಿಲ್ಲ. ಎರಡು ಬೇರೆ ಬೇರೆ ಧರ್ಮಗಳಿಗೆ ಸೇರಿದ ದಂಪತಿಗಳು ಮಕ್ಕಳನ್ನು ದತ್ತು ಪಡೆಯಲು ಹಿಂದೂ ಕಾಯಿದೆ ಅವಕಾಶ ನೀಡುವುದಿಲ್ಲ. ಆಸ್ತಿಹಕ್ಕುಗಳು ಮತ್ತು ಪಿತ್ರಾರ್ಜಿತ ಬಾಧ್ಯತೆಗಳಿಗೆ ಸಂಬಂಧಿಸಿದಂತೆ ಎಲ್ಲಾ ಧಾರ್ಮಿಕ ಕಾಯಿದೆಗಳು ಪುರುಷರ ಪರವಾಗಿರುತ್ತವೆ.

**"ಆಳುವ ವರ್ಗಗಳು ಶೋಷಿತ ವರ್ಗಗಳನ್ನು ಶಿಸ್ತುಕ್ರಮಕ್ಕೊಳಪಡಿಸುವ ಸಾಧನವನ್ನಾಗಿ ಲೈಂಗಿಕ ಶೋಷಣೆಯನ್ನು ಅದರಲ್ಲೂ ಮುಖ್ಯವಾಗಿ ಅತ್ಯಾಚಾರ ರೂಪದಲ್ಲಿ ಬಂಡಾಯ ಮಾಡುವ ಬಡರೈತರು ಮತ್ತು ಭೂಹೀನ ಕಾರ್ಮಿಕರನ್ನು ಶಿಕ್ಷಿಸುವ ನಿಟ್ಟಿನಲ್ಲಿ ಪುರುಷರನ್ನು ಹೊಡೆಯುವುದು ಮತ್ತು ಅವರ ಗುಡಿಸಲುಗಳನ್ನು ಸುಡುವುದರಿಂದ ಮಾತ್ರ ಭೂಮಾಲೀಕರು ಮತ್ತು ಪೊಲೀಸರು ತೃಪ್ತರಾಗುವುದಿಲ್ಲ. ಹಲವು ಪ್ರಕರಣಗಳಲ್ಲಿ ಅವರು ಕಾರ್ಮಿಕರ ಮಹಿಳೆಯರ ಮೇಲೂ ಅತ್ಯಾಚಾರ ಮಾಡುತ್ತಾರೆ. ಏಕೆ? ಸಾಮಾನ್ಯವಾದ ನಂಬಿಕೆಯಂತೆ ಈ ಅತ್ಯಾಚಾರಗಳು ಅತ್ಯಾಚಾರಿಗಳ ದಮನಿತ ಲೈಂಗಿಕ ಒತ್ತಡಗಳಿಗೆ ಒಂದು ರೀತಿಯ ರಕ್ಷಕ ಕವಾಟವಂತೂ ಅಲ್ಲವೆನ್ನುವುದು ಸ್ಪಷ್ಟ. ವಾಸ್ತವದಲ್ಲಿ ಈ ಕ್ರಿಯೆಗಳು ಲೈಂಗಿಕತೆಗೆ ಸಂಬಂಧಿಸಿರುವುದಿಲ್ಲ ಅಥವಾ ಅತ್ಯಾಚಾರಿಗಳ ಗುರಿ ಮಹಿಳೆಯರು ಆಗಿರುವುದಿಲ್ಲ. ಬದಲಿಗೆ ಬಡವರ್ಗಗಳ ಪುರುಷರಾಗಿರುತ್ತಾರೆ. ಈ ದಿವಾಳಿಯಾದ ಪುರುಷರು ಇನ್ನೂ ಹೊಂದಿರುವ ಒಂದೇ ಒಂದು ಆಸ್ತಿಯೆಂದರೆ ಆ ಮಹಿಳೆಯರು ಎಂದು ನೋಡಲಾಗುತ್ತದೆ. ತಮ್ಮ ಮಹಿಳೆಯರ ಮೇಲಾದ ಅತ್ಯಾಚಾರ ತಮ್ಮದು ಸಂಪೂರ್ಣವಾದ ಶಕ್ತಿರಹಿತತೆ ಮತ್ತು ಆಸ್ತಿರಹಿತತೆಗಳ ಸ್ಥಾನವೆನ್ನುವ ಪಾಠವನ್ನು ಇವರಿಗೆ ಬೋಧಿಸುತ್ತದೆ. ಭೂಮಾಲೀಕರು ಮತ್ತು ಪೊಲೀಸರು ಬಡ ಮಹಿಳೆಯರ ಮೇಲೆ ನಡೆಸುವ ಆಕ್ರಮಣವು ಆಸ್ತಿಹೀನ ವರ್ಗಗಳ ಪುರುಷರನ್ನು ಸೋಲಿಸಲು ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಈಗಿರುವ ಅಥವಾ ಹೊಸದಾಗಿ ಹುಟ್ಟಿಕೊಳ್ಳುತ್ತಿರುವ ಬಲಾಬಲ ಸಂಬಂಧಗಳನ್ನು ಸುಸ್ಥಿರಗೊಳಿಸಲು ಬಳಸುವ ಸಾಧನವಾಗಿದೆ. ಇಲ್ಲಿ ವರ್ಗ ಆಳ್ವಿಕೆ ಮತ್ತು ಮಹಿಳೆಯರ ತುಳಿತಗಳು ಪರಸ್ಪರ ನಿಕಟವಾಗಿ ಹೆಣೆದುಕೊಂಡಿವೆ. ಭೂಮಿಯ ಒಡೆಯ ಆ ಭೂಮಿಯ ಮಹಿಳೆಯರ ಒಡೆಯನೂ ಆಗುತ್ತಾನೆ"** *(ಮರಿಯಾ ಮೀಸ್ : ವಿಮೆನ್:ದಿ ಲಾಸ್ಟ್ ಕಾಲೊನಿ : ಪು. 138)*



ಅದೇ ರೀತಿ ಬೇರೆ ಬೇರೆ ಜನಾಂಗ ಅಥವಾ ಭಾಷಾ ಗುಂಪುಗಳಿಗೆ ಸೇರಿದ ಜನರ ನಡುವೆ ವ್ಯತ್ಯಾಸಗಳಿರಬಹುದು. "ಮೇಲು" ಜಾತಿಯ ಮಹಿಳೆಯರು ತಮ್ಮ ಚಲನೆಯ ಮೇಲೆ "ಕೆಳ" ಜಾತಿಯ ಮಹಿಳೆಯರಿಗಿಂತ ಹೆಚ್ಚು ನಿರ್ಬಂಧಗಳನ್ನು ಎದುರಿಸುತ್ತಾರೆ. ಏಕೆಂದರೆ ಅವರು ತಮ್ಮ ಜಾತಿಯ ಶುದ್ಧತೆ ಮತ್ತು ಶ್ರೇಷ್ಠತೆಗಳನ್ನು ರಕ್ಷಿಸಬೇಕಾಗಿರುತ್ತದೆ. ಸಾಮಾನ್ಯವಾಗಿ ಹೇಳುವುದಾದರೆ, "ಮೇಲು" ಜಾತಿಗಳು ಹೆಚ್ಚಾಗಿ ಪುರುಷಾಧಿಪತ್ಯ ಅಥವಾ ಪುರುಷ ಪ್ರಧಾನತೆಯದಾಗಿರುತ್ತವೆ. ಏಕೆಂದರೆ, ಅವು ಜಾತಿ ಶುದ್ಧತೆ ಮತ್ತು ಪಿತ್ರಾರ್ಜಿತ ಆಸ್ತಿ ಅಥವಾ ಆಸ್ತಿ ನಿಯಂತ್ರಣಗಳ ಬಗ್ಗೆ ಕಾಳಜಿ ಹೊಂದಿರುತ್ತವೆ. ಅದಕ್ಕಾಗಿಯೇ "ಮೇಲು" ಜಾತಿಯ ಕುಟುಂಬಗಳು ತಮ್ಮ ಮಹಿಳೆಯರ ಉಡುಪು ಮತ್ತು ಚಲನೆಗಳ ಮೇಲೆ ನಿರ್ಬಂಧಗಳನ್ನು ಹೇರುವ ಮೂಲಕ ಮಹಿಳೆಯರ ಲೈಂಗಿಕತೆಯನ್ನು ನಿಯಂತ್ರಿಸುತ್ತವೆ. ಕಾಪಾಡಲು ಯಾವುದೇ ಪರಿಶುದ್ಧತೆ ಹೊಂದಿಲ್ಲದ "ಕೆಳ" ಜಾತಿಗಳ ಮಹಿಳೆಯರು ಅದೇ ರೀತಿಯ ನಿರ್ಬಂಧಕ್ಕೊಳಗಾಗಿರುವುದಿಲ್ಲ.

ಅದೇ ರೀತಿ ಬೇರೆ ಬೇರೆ ವರ್ಗಗಳಿಗೆ ಸೇರಿದ ಪುರುಷರು ಮತ್ತು ಮಹಿಳೆಯರ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸ್ಥಾನಮಾನಗಳಲ್ಲಿ ಕೂಡ ವ್ಯತ್ಯಾಸವನ್ನು ಕಾಣುತ್ತೇವೆ. ಬಂಡವಾಳಗಾರರು ಮತ್ತು ಆಸ್ತಿವಂತ ವರ್ಗಗಳಿಗೆ ಆರ್ಥಿಕ ಸಂಪನ್ಮೂಲಗಳು, ಶಿಕ್ಷಣ ಮತ್ತು ಮಾಹಿತಿಗಳು ಕೈಗೆಟುಕುವಂತಿರುತ್ತವೆ. ಇವರು ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಸಂಸ್ಥೆಗಳನ್ನು ಶ್ರಮಿಕ ವರ್ಗದವರು ನಿಯಂತ್ರಿಸದಂತೆ ನೋಡಿಕೊಳ್ಳುತ್ತಾರೆ. ಶ್ರೀಮಂತ ಮತ್ತು ಶ್ರಮಿಕ ವರ್ಗಗಳ ಮಹಿಳೆಯರ ಪಾತ್ರ, ಜವಾಬ್ದಾರಿ ಮತ್ತು ವಿಶೇಷಾಧಿಕಾರಗಳಲ್ಲಿ ವ್ಯತ್ಯಾಸಗಳಿವೆ. ಈ ಎರಡೂ ವರ್ಗಗಳ ಮಹಿಳೆಯರಲ್ಲಿ ಒಂದು ಮುಖ್ಯವಾದ ವ್ಯತ್ಯಾಸವನ್ನು ಏಂಜೆಲ್ಸ್ ಗಮನಿಸುತ್ತಾರೆ. ಅದೆಂದರೆ, ಶ್ರೀಮಂತ ಮಹಿಳೆ ಮನೆಯ ಹೊರಗೆ ದುಡಿಯುವುದಿಲ್ಲ. ಅವಳು ಸಂಪೂರ್ಣವಾಗಿ ತನ್ನ ಗಂಡನನ್ನು ಅವಲಂಬಿಸುತ್ತಾಳೆ, ತಾನೇ ಒಂದು ಆಸ್ತಿಯಾಗಿರುತ್ತಾಳೆ. ಅವಳ ಒಂದೇ ಒಂದು ಕೆಲಸವೆಂದರೆ ವಾರಸುದಾರರಿಗೆ ಜನ್ಮನೀಡುವುದು. ಆದರೆ ಶ್ರಮಿಕ ವರ್ಗದ ಮಹಿಳೆ ತಾನೊಬ್ಬ ಶ್ರಮಿಕಳಾಗುವ ಮೂಲಕ ತನ್ನ ದಮನವನ್ನು ಈಗಾಗಲೇ ತಡೆದುಬಿಟ್ಟಿದ್ದಾಳಾದ್ದರಿಂದ ಸ್ವಲ್ಪಮಟ್ಟಿನ ಆರ್ಥಿಕ ಸ್ವಾತಂತ್ರ್ಯವನ್ನು ಹೊಂದಿದ್ದಾಳೆ.

ಶ್ರಮಿಕವರ್ಗದ ಮಹಿಳೆಯರು ಪರದಾ ಪದ್ಧತಿಯನ್ನಾಗಲೀ ಅಥವಾ ಪ್ರತ್ಯೇಕತೆಯನ್ನಾಗಲೀ ಆಚರಿಸುವುದಿಲ್ಲ. ಏಕೆಂದರೆ, ಅವರು ತಮ್ಮ ಜೀವನೋಪಾಯಕ್ಕಾಗಿ ಸಾರ್ವಜನಿಕ ಸ್ಥಳಗಳನ್ನು ಪ್ರವೇಶಿಸಬೇಕಾಗುತ್ತದೆ. ಸಣ್ಣ ರೈತ ಕುಟುಂಬಗಳು ತಮ್ಮ ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತಲೇ ತಮ್ಮ ಮಹಿಳೆಯರು ಮನೆಯ ಹೊರಗೆ ದುಡಿಯುವುದನ್ನು ಪ್ರೋತ್ಸಾಹಿಸುವುದಿಲ್ಲ. ಮನೆಯ ಒಳಗೇ ಉಳಿದುಕೊಂಡು ಪರಾವಲಂಬಿಗಳಾದ ಅಥವಾ ಪ್ರತ್ಯೇಕಗೊಂಡ ಮಹಿಳೆಯರು ಹಲವು ಪುರುಷ ಪ್ರಧಾನ ಸಮಾಜಗಳಲ್ಲಿ ಸಾಮಾಜಿಕ ಸ್ಥಾನಮಾನದ ಸಂಕೇತಗಳಾಗಿ ಪರಿಗಣಿತವಾಗುತ್ತಾರೆ.

**ಲಿಂಗತ್ವಾಧರಿತ ಶ್ರಮವಿಭಜನೆ ಎಂದರೆ ಏನೆಂದು ವಿವರಣೆ ನೀಡುವಿರಾ?**

ಲಿಂಗತ್ವಾಧರಿತ ಅಥವಾ ಲಿಂಗಾಧರಿತ ಶ್ರಮವಿಭಜನೆಯು ಮಹಿಳೆ ಮತ್ತು ಪುರುಷರಿಗೆ ಬೇರೆ ಬೇರೆಯಾದ ಪಾತ್ರಗಳು, ಜವಾಬ್ದಾರಿಗಳು ಮತ್ತು ಕರ್ತವ್ಯಗಳನ್ನು ನಿರ್ದಿಷ್ಟಗೊಳಿಸುವುದಕ್ಕೆ (allocation) ಸಂಬಂಧಿಸಿವೆ. ಇದು ಪುರುಷರು ಮತ್ತು ಮಹಿಳೆಯರು ಏನನ್ನು ಮಾಡಬೇಕು ಮತ್ತು ಏನನ್ನು ಮಾಡಲು ಸಮರ್ಥರು ಎನ್ನುವ ಸಮಾಜದ ಕಲ್ಪನೆಗಳನ್ನಾಧರಿಸಿರುತ್ತವೆ. ಲಿಂಗ ಮತ್ತು ಲಿಂಗತ್ವದ ಪಾತ್ರಗಳಿಗನುಗುಣವಾಗಿ ಹುಡುಗಿಯರು ಮತ್ತು ಹುಡುಗರು, ಮಹಿಳೆಯರು ಮತ್ತು ಪುರುಷರಿಗೆ ಅವರ ವ್ಯಕ್ತಿಗತವಾದ ಆದ್ಯತೆಗಳು ಅಥವಾ ಸಾಧ್ಯತೆಗಳನ್ನು ಪರಿಗಣಿಸದೆ ಬೇರೆ ಬೇರೆಯೇ ಆದ ಕರ್ತವ್ಯಗಳು ಮತ್ತು ಜವಾಬ್ದಾರಿಗಳನ್ನು ವಹಿಸಲಾಗುತ್ತದೆ. ಎಲ್ಲಾ ಕೆಲಸ ಚಟುವಟಿಕೆಗಳನ್ನು ಉತ್ಪಾದಕ, ಸಂತಾನೋತ್ಪಾದಕ ಮತ್ತು ಸಮುದಾಯಕಾರ್ಯ ಚಟುವಟಿಕೆಗಳೆಂದು ವಿಭಜಿಸಬಹುದು. ಇವುಗಳಲ್ಲಿ ಪ್ರತಿಯೊಂದನ್ನೂ "ಲಿಂಗತ್ವದ ಶ್ರಮವಿಭಜನೆ"ಗಾಗಿ ಪರಿಶೀಲಿಸಬಹುದು.

ಉತ್ಪಾದನೆ ಎನ್ನುವುದು ವಸ್ತುಗಳ ಉತ್ಪಾದನೆ ಮತ್ತು ಉಪಯೋಗ/ಬಳಕೆ ಮತ್ತು ವ್ಯಾಪಾರಕ್ಕಾಗಿ ಬೇಕಾದ ಸೇವೆಗಳಿಗೆ ಅನ್ವಯಿಸುತ್ತದೆ. ಕಾರ್ಖಾನೆಗಳು, ಕಛೇರಿಗಳು ಮತ್ತು ಬೆಳೆಯುವ ಜಮೀನಿನಲ್ಲಿ ನಡೆಯುವ ಎಲ್ಲಾ ಕೆಲಸಗಳು ಈ ವರ್ಗಕ್ಕೆ ಸೇರಿವೆ. ಈ ಚಟುವಟಿಕೆಗಳನ್ನು ಮಾತ್ರ ಆರ್ಥಿಕವಾದವುಗಳೆಂದು ಪರಿಗಣಿಸಲಾಗುತ್ತದೆ. ಹಾಗೂ ದೇಶಗಳ ಒಟ್ಟು ರಾಷ್ಟ್ರೀಯ ಉತ್ಪಾದನೆಯಲ್ಲಿ ಸೇರಿಸಲಾಗುತ್ತದೆ. ಈ ಉತ್ಪಾದನಾ ಚಟುವಟಿಕೆಗಳಲ್ಲಿ ಮಹಿಳೆ ಮತ್ತು ಪುರುಷರಿಬ್ಬರೂ ತೊಡಗಿಕೊಂಡಿರುತ್ತಾರಾದರೂ ಲಿಂಗತ್ವದ ಶ್ರಮವಿಭಜನೆ ತನ್ನ ಪ್ರಭುತ್ವವನ್ನು ಸಾಧಿಸಿದೆ. ಪುರುಷರು ಹೆಚ್ಚು ಕೌಶಲದ ಮತ್ತು ಹೆಚ್ಚು ವೇತನದ ಉದ್ಯೋಗಗಳನ್ನು ಮಾಡುತ್ತಾರೆ. ಹೆಚ್ಚು ಸಂದರ್ಭಗಳಲ್ಲಿ ಮಹಿಳೆಯರು ಮಾಡುವ ಉತ್ಪಾದನಾ ಚಟುವಟಿಕೆಗಳು ಅವರ ಮನೆಯಲ್ಲಿ ಮಾಡುವ ಕೆಲಸಗಳ ವಿಸ್ತರಣೆಯಾಗಿರುತ್ತವೆ. ಕೃಷಿ ಕ್ಷೇತ್ರದಲ್ಲಿ ಮಹಿಳೆಯರ ಉತ್ಪಾದಕ ದುಡಿಮೆಯು ಆರ್ಥಿಕ ಲೆಕ್ಕ ಪತ್ರಗಳಲ್ಲಿ ಪ್ರತಿಬಿಂಬಿತವಾಗುವುದಿಲ್ಲ. ಕಾರಣ ಅದನ್ನು ಮಹಿಳೆಯರ ಮನೆಗೆಲಸಗಳ ವಿಸ್ತರಣೆಯೆಂದು ಪರಿಗಣಿಸಲಾಗುತ್ತದೆ. ಮಹಿಳೆಯರ ಉತ್ಪಾದನಾ ಚಟುವಟಿಕೆಗಳಿಗೆ ಕಡಿಮೆ ಪ್ರಾಮುಖ್ಯ ಮತ್ತು ಕಡಿಮೆ ಮೌಲ್ಯವನ್ನು ನೀಡಲಾಗುತ್ತದೆ. ಬಾಡಿಗೆಗೆ ಪಡೆಯುವ ಕಾರ್ಮಿಕರಲ್ಲಿ ಮಹಿಳೆಯರು ಕೊನೆಯವರಾಗಿರುತ್ತಾರೆ. ಕಾರಣ ಪುರುಷರು ಪ್ರಧಾನವಾಗಿ ಅನ್ನವನ್ನು ಸಂಪಾದಿಸುವವರು ಮತ್ತು ಕುಟುಂಬದ ಯಜಮಾನರು ಎನ್ನುವ ಪುರುಷ ಪ್ರಧಾನತೆಯ ಅಭಿಪ್ರಾಯವೇ ಆಗಿದೆ. ಆದ್ದರಿಂದಲೇ ಗಂಡಿನ ಉದ್ಯೋಗಕ್ಕೆ ಹೆಚ್ಚು ಒತ್ತು ಮತ್ತು ಆದ್ಯತೆಗಳನ್ನು ನೀಡಲಾಗಿದೆ.

**ಪುನರುತ್ಪಾದನೆ(Reproduction)**ಎಂದರೆ ಎರಡು ರೀತಿಯದು ಜೈವಿಕ ಮತ್ತು ಸಾಮಾಜಿಕ ಪುನರುತ್ಪಾದನೆ. ಜೈವಿಕ ಪುನರುತ್ಪಾದನೆಯೆಂದರೆ ಹೊಸ ಮಾನವ ಜೀವಿಗಳಿಗೆ ಜನ್ಮ ನೀಡುವುದು. ಈ ಚಟುವಟಿಕೆಯನ್ನು ಕೇವಲ ಮಹಿಳೆಯರು ಮಾತ್ರ ಮಾಡಬಲ್ಲರು. ಸಾಮಾಜಿಕ ಪುನರುತ್ಪಾದನೆಯು ಮಾನವನ ಉಳಿವು ಮತ್ತು ನಿರ್ವಹಣೆಗಳಿಗೆ ಅಗತ್ಯವಾದ ಆರೈಕೆ ಮತ್ತು ಪೋಷಣೆಯ ಎಲ್ಲಾ ಚಟುವಟಿಕೆಗಳಿಗೆ ಸಂಬಂಧಿಸಿದೆ. ಪುನರುತ್ಪಾದನಾ ಚಟುವಟಿಕೆಗಳೆಂದರೆ ಮಾನವಶ್ರಮಿಕರನ್ನು ಉತ್ಪಾದಿಸುವ ಎಲ್ಲಾ ಚಟುವಟಿಕೆಗಳಾಗುತ್ತವೆ. ಮಕ್ಕಳ ಆರೈಕೆ, ಅಡಿಗೆಮಾಡುವುದು, ಹಾಲೂಡಿಸುವುದು, ಊಟ ಮಾಡಿಸುವುದು, ತೊಳೆಯುವುದು, ಸ್ವಚ್ಛಗೊಳಿಸುವುದು, ಪೋಷಿಸುವುದು, ಮತ್ತಿತರ ಕೌಟುಂಬಿಕ ಚಟುವಟಿಕೆಗಳು ಈ ವರ್ಗಕ್ಕೆ ಸೇರುತ್ತವೆ. ಮಾನವನ ಉಳಿವಿಗೆ ಇವು ಅಗತ್ಯವಾದಾಗಲೂ ಇವುಗಳನ್ನು ಒಂದು ದುಡಿಮೆಯೆಂದಾಗಲೀ ಅಥವಾ ಒಂದು ಆರ್ಥಿಕ ಚಟುವಟಿಕೆಯೆಂದಾಗಲೀ ಪರಿಗಣಿಸಲಾಗಿಲ್ಲ. ಆದ್ದರಿಂದ ಇವು ಅಗೋಚರ, ಗುರುತಿರದ ಹಾಗೂ ವೇತನರಹಿತವಾದುವಾಗಿವೆ. ಪುನರುತ್ಪಾದನಾ ಕೆಲಸವನ್ನು ವಿಶ್ವಾದ್ಯಂತ ಹೆಚ್ಚಾಗಿ ಮಹಿಳೆಯರು ಮತ್ತು ಹೆಣ್ಣುಮಕ್ಕಳು ಮಾಡುತ್ತಾರೆ.

ಸಮುದಾಯ ಕಾರ್ಯವು ಸಾಮುದಾಯಿಕ ಜೀವನದ ಮುಂದುವರಿಕೆ ಮತ್ತು ಸಂಘಟನೆಗಳಿಗೆ ಸಂಬಂಧಿಸಿದೆ. ಆಳ್ವಿಕೆ, ಸಾಮಾಜಿಕ ಮತ್ತು ಸಾಂಸ್ಕೃತಿಕ ಹಬ್ಬಗಳ ಏರ್ಪಾಡು ಮತ್ತು ಅವುಗಳಲ್ಲಿ ಭಾಗವಹಿಸುವಿಕೆ, ಸಾಮಾಜಿಕ ಸೇವೆ, ರಸ್ತೆಗಳು, ಶಾಲೆಗಳು, ಆರೋಗ್ಯ ಸೇವೆ ಮುಂತಾದ ಸೌಲಭ್ಯಗಳೆಲ್ಲವೂ ಸಮುದಾಯ ಚಟುವಟಿಕೆಗಳಾಗಿವೆ.

## ನಮ್ಮೆಜಮಾನ್ರು

ಬೆಳಗ್ಗೆ ಮನೆಬಿಟ್ಟರೆ
ಸಂಜೆ ಮನೆಸೇರೋದು
ಕೈಮುಟ್ಟಿ ಯಾವ ಕೆಲ್ಸಾ ಮಾಡೊಲ್ಲ
ನಾನು ಕೇಳೋದೂ ಇಲ್ಲ
ಆದ್ರೂ ನಮ್ಮೆಜಮಾನ್ರು ತುಂಬಾ ಒಳ್ಳೆಯವರು !

ನಮ್ಮೆಜಮಾನ್ರು
ನನ್ನ ಎಲ್ಲಿಗೂ ಕಳಿಸುವುದಿಲ್ಲ
ತವರು ಮನೆಗೆ ಹೋದ್ರು
ಬೆಳಗ್ಗೆ ಹೋಗಿ ಸಂಜೆ ಬಂದುಬಿಡಬೇಕು
ಆದ್ರು ನಮ್ಮೆಜಮಾನ್ರು ತುಂಬಾ ಒಳ್ಳೆಯವರು !

ನಮ್ಮೆಜಮಾನ್ರು
ನನ್ನ ತಾಯಿ ಮಾಡಿಸಿಕೊಟ್ಟ
ಮೂರೆಳೆ ಸರ ಮಾರಿ ಜಮೀನು ತೆಗ್ದ್ರು
ಇದುವರೆಗೂ ನಾನು ಕೇಳಿಲ್ಲ, ಅವರು ಮಾಡಿಸಿಕೊಟ್ಟಿಲ್ಲ
ಆದ್ರೂ ನಮ್ಮೆಜಮಾನ್ರು ತುಂಬಾ ಒಳ್ಳೆಯವರು !

-ಎಚ್ಚೆಸ್

ಇವುಗಳಲ್ಲಿ ಪುರುಷರು ಮತ್ತು ಮಹಿಳೆಯರಿಬ್ಬರೂ ಭಾಗವಹಿಸುತ್ತಾರಾದರೂ ಅದು "ಗಂಡು" ಚಟುವಟಿಕೆಗಳು ಮತ್ತು ಹೆಣ್ಣು ಚಟುವಟಿಕೆಗಳೆಂದು ನಿರ್ವಹಿಸುವ ನಿಗದಿತ ಮಾನದಂಡಗಳಿಗನುಸಾರವಾಗಿರುತ್ತವೆ.

ಆದ್ದರಿಂದ ಲಿಂಗತ್ವದ ಶ್ರಮವಿಭಜನೆಯು ಕುಟುಂಬದೊಳಗಿನ ಪುನರುತ್ಪಾದನಾ ಚಟುವಟಿಕೆಗಳಲ್ಲಿ ಮಾತ್ರವಲ್ಲ, ಹೆಚ್ಚಾಗಿ ಮನೆಯ ಹೊರಗೆ ನಡೆಯುವ ಉತ್ಪಾದಕ ಮತ್ತು ಸಾಮುದಾಯಿಕ ಚಟುವಟಿಕೆಗಳಲ್ಲಿ ಕೂಡ ಕ್ರಿಯಾಶೀಲವಾಗಿರುತ್ತದೆ. ಲಿಂಗತ್ವದ ಅಸಮಾನತೆಗಳು ಮತ್ತು ಅಸಮರೂಪಗಳು ಎಲ್ಲೆಲ್ಲಿ ಮತ್ತು ಹೇಗೆ ನೆಲೆಸಿವೆ ಹಾಗೂ ಪುನರ್ರಚಿತವಾಗಿವೆಯೆಂದು ತಿಳಿಯಲು ಲಿಂಗಾಧರಿತ ಶ್ರಮವಿಭಜನೆಯನ್ನು ಒಂದು ಪ್ರಧಾನ ಪರಿಕಲ್ಪನೆಯೆಂದು ಭಾವಿಸಲಾಗಿದೆ.

ಈ ವಿಭಜನೆ ಕಾಲಾನುಕ್ರಮದಲ್ಲಿ ಲಿಂಗಾಧರಿತ ಕೌಶಲ ವಿಭಜನೆಯಾಗಿ ಬದಲಾಗುತ್ತದೆ. ಪುರುಷ–ಮಹಿಳೆಯರು, ಹುಡುಗ–ಹುಡುಗಿಯರು ತಮ್ಮ ಲಿಂಗತ್ವದ ಪಾತ್ರಗಳಿಗೆ ಹೊಂದಿಕೊಳ್ಳುತ್ತವೆಂದು ಪರಿಗಣಿಸಲಾಗುವ ಕೌಶಲಗಳನ್ನು ಮಾತ್ರ ಕಲಿಯುವುದಷ್ಟೇ ಅಲ್ಲ, ಅವುಗಳಲ್ಲಿ ಪರಿಣತಿಯನ್ನೂ ಪಡೆಯುತ್ತಾರೆ. ಹೀಗೆ ಬೇರೆ ಬೇರೆ ಕೌಶಲ ಮತ್ತು ಆಸಕ್ತಿಗಳನ್ನು ಅವರಲ್ಲಿ ಸೃಷ್ಟಿಸಲಾಗುತ್ತದಲ್ಲದೆ ಅವರು ಒಂದಲ್ಲಾ ಒಂದನ್ನು ತಮಗೆ ಸೇರಿದುದೆಂದು ಭಾವಿಸುವಂತೆ ಮಾಡಲಾಗುತ್ತದೆ.

ಲಿಂಗತ್ವದ ಶ್ರಮ ವಿಭಜನೆಯು ಏಣಿಶ್ರೇಣಿಗಳಿಗೆ ಮತ್ತು ಅಸಮಾನತೆಗಳಿಗೆ ದಾರಿಮಾಡಿಕೊಡುತ್ತದೆ. ಏಕೆಂದರೆ ಮಹಿಳೆಯರ ದುಡಿಮೆಗೆ ಬೆಲೆಕಟ್ಟಲಾಗಿಲ್ಲ ಅಥವಾ ಅದಕ್ಕೆ ಸಮಾನ ಪ್ರತಿಫಲವನ್ನು ನೀಡಿಲ್ಲ. ಈಗಲೂ ಕೂಡ ಸಮಾನ ಕೆಲಸಕ್ಕೆ ಸಮಾನ ವೇತನ ಎನ್ನುವುದು ಹೆಚ್ಚಿನ ದೇಶಗಳಲ್ಲಿ ಒಪ್ಪಿತವಾಗಿಲ್ಲ. ಮನೆಗೆಲಸಕ್ಕೆ ವೇತನ ನೀಡುವುದಿಲ್ಲ. ದುಡಿಮೆಯ ಸ್ಥಳದಲ್ಲಿ ಸ್ಥಗಿತತೆ (recession) ಉಂಟಾದಾಗ ಮೊದಲಿಗೆ ಗುರಿಯಾಗುವವರೆಂದರೆ ಮಹಿಳೆಯರೇ.

ಉತ್ಪಾದನಾ ಪ್ರಕ್ರಿಯೆಗಳಲ್ಲಿ (ಅದರಲ್ಲೂ ಗೃಹಾಧರಿತ ಉತ್ಪಾದನೆಯಲ್ಲಿ) ಪುರುಷರು ಮತ್ತು ಮಹಿಳೆಯರಿಗೆ ಗೊತ್ತುಪಡಿಸುವ ಕೆಲವು ಕಾರ್ಯಭಾರಗಳು(tasks)ಕೂಡ ಸಂಪನ್ಮೂಲ ಮತ್ತು ಶ್ರಮದ ಉತ್ಪಾದನೆಗಳ ಮೇಲಿನ ಅಧಿಕಾರ ಮತ್ತು ನಿಯಂತ್ರಣಗಳಿಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಎಡೆಮಾಡಿಕೊಡುತ್ತವೆ. ಈ ಲಿಂಗತ್ವಾಧರಿತ ಶ್ರಮವಿಭಜನೆಯಿಂದಾಗಿ ಪುರುಷರು ಭೂಮಿ, ತಾಂತ್ರಿಕತೆ, ಸಾಲ, ಉತ್ಪನ್ನಗಳ ಮಾರಾಟದಿಂದ ಬರುವ ಹಣಕಾಸು ಮುಂತಾದವುಗಳ ಮೇಲೆ ತಮ್ಮ ನಿಯಂತ್ರಣವನ್ನು ಸಾಧಿಸುತ್ತಾರೆ. ಸಾಮಾನ್ಯವಾಗಿ, ಮಹಿಳೆಯರು ಜೀವನೋಪಾಯಕ್ಕಾಗಿ ದುಡಿಯುತ್ತಾರೆ ; ಪುರುಷರು ವಿನಿಮಯಕ್ಕಾಗಿ ಅಥವಾ ನಗದು ಹಣಕ್ಕಾಗಿ ಉತ್ಪಾದಿಸುತ್ತಾರೆ.

ಲಿಂಗತ್ವ ಮತ್ತು ಲಿಂಗತ್ವದ ಸಂಬಂಧಗಳಂತೆಯೇ ಲಿಂಗಾಧರಿತ ಶ್ರಮವಿಭಜನೆ ಕೂಡ ಎಲ್ಲೆಡೆಯೂ ಒಂದೇ ಆಗಿಲ್ಲ. ಅದು ಸಂಸ್ಕೃತಿ, ಸ್ಥಳ ಮತ್ತು ಕಾಲಗಳಿಗೆ ನಿರ್ದಿಷ್ಟವಾಗಿರುತ್ತದೆ. ಸಮಾಜದಲ್ಲಿ ಲಿಂಗಾಧರಿತ ಶ್ರಮವಿಭಜನೆಯನ್ನು ಪ್ರಶ್ನಿಸುವುದೆಂದರೆ ಅಲ್ಲಿ "ಗಂಡು" ಅಥವಾ "ಹೆಣ್ಣು" ಆಗಿರುವುದನ್ನು ಪ್ರಶ್ನಿಸುವುದೆಂದೇ ಅರ್ಥ.

**"ಮಹಿಳೆಯರು ಮಾಡುವ ಉತ್ಪಾದಕ ಮತ್ತು ಸಂತಾನೋತ್ಪಾದಕ ಕೆಲಸಕ್ಕೆ ಸಾಮಾನ್ಯವಾಗಿ ಹೆಚ್ಚಿನ ಆರ್ಥಿಕ ಮೌಲ್ಯವನ್ನು ಕೊಟ್ಟಿರುವುದಿಲ್ಲ. ಯುನೈಟೆಡ್ ನೇಷನ್ಸ್ ಡೆವಲಪ್‌ಮೆಂಟ್ ಪ್ರೋಗ್ರಾಂ (UNDP) ನ 1995ರ ಮಾನವ ಅಭಿವೃದ್ಧಿ ವರದಿಯಂತೆ, ಮಹಿಳೆಯರ ಅಗೋಚರ ಮತ್ತು ವೇತನರಹಿತ ಶ್ರಮದ ಕೊಡುಗೆ ವಾರ್ಷಿಕವಾಗಿ ಅಮೆರಿಕದ 11 ಟ್ರಿಲಿಯನ್‌ಗೆ ಸಮವಾಗಿದೆ".**

**"ಗಂಡ ತನ್ನ ಜೇಬಿನಲ್ಲಿ 'ವಸ್ತುಸಾಮಗ್ರಿಗಳ ರಾಣಿ'ಯಾದ ಹಣವನ್ನಿಟ್ಟುಕೊಂಡಿರುತ್ತಾನೆ. ಆದರೆ ಹೆಂಡತಿ ತನ್ನ ದುಡಿಮೆಗೆ ವೇತನವನ್ನು ಪಡೆಯುವುದಿಲ್ಲ. ಗಂಡ ಅವಳಿಗೆ ಊಟ ಮತ್ತು ವಸತಿಯನ್ನು ನೀಡಲೇಬೇಕು. ಅದನ್ನವನು ಒಬ್ಬ ಗುಲಾಮನಿಗೂ ಮಾಡಬಹುದು. ಹೆಂಡತಿಯ ದುಡಿಮೆಯ ಕಾಲಾವಧಿ, ದುಡಿಮೆಯ ಪರಿಸ್ಥಿತಿಗಳು, ರಜಾದಿನಗಳು, ವಿರಾಮಗಳನ್ನು ಒಪ್ಪಂದದ ಮೇಲೆ ನಿಶ್ಚಯಿಸಿರುವುದಿಲ್ಲ. ವಿವಾಹದ ಒಪ್ಪಂದವನ್ನು ನೇಮಕಾತಿಯ ಒಪ್ಪಂದದೊಂದಿಗೆ ಹೋಲಿಸಲಾಗುವುದಿಲ್ಲ. ಇಲ್ಲಿ ಮುಷ್ಕರದ ಹಕ್ಕಿರುವುದಿಲ್ಲ. ಗೃಹಿಣಿಯರ ಸೋದರೀ ಸಂಘಟನೆಗಳಿಲ್ಲ. ಬದಲಿಗೆ ಅವರನ್ನು ವ್ಯಕ್ತೀಕರಣ ಮತ್ತು ತೃಣೀಕರಣ (atomised) ಗೊಳಿಸಲಾಗಿದೆ. ಗೃಹಿಣಿಯರಾಗಿ ತಮ್ಮ ದುಡಿಮೆಯಾಧಾರದ ಮೇಲೆ ಯಾವುದೇ ಸಾಮಾಜಿಕ ಭದ್ರತೆಯನ್ನು ಅನುಭವಿಸುವುದಿಲ್ಲ ಅಥವಾ ತಮ್ಮ ಗಂಡಂದಿರ ಸರ್ವಾಧಿಪತ್ಯ ಮತ್ತು ಹಿಂಸೆಗಳಿಂದ ಕಾನೂನು ಅವರನ್ನು ರಕ್ಷಿಸುವುದಿಲ್ಲ. ಮನೆಯಲ್ಲಿ ಮಾನವ ಹಕ್ಕುಗಳ ಭರವಸೆಯನ್ನು ಯಾರೂ ನೀಡುವುದಿಲ್ಲ. ದೈಹಿಕ ಸುರಕ್ಷತೆಯ ಯಾವುದೇ ಭರವಸೆ ಇಲ್ಲದಾಗ ಕೂಡ ಅವರು ಸಾರ್ವಜನಿಕ ಕಾಳಜಿಯ ವಿಷಯವಾಗಿ ಕಾಣುವುದಿಲ್ಲವಾದ್ದರಿಂದ ಅವರು ಖಾಸಗಿ ವಿಷಯವಾಗಿದ್ದಾರೆ.**

**"ಮಡದಿ ಸೇವೆ ಮಾಡಲೇಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಅವಳು ಗಂಡನಿಗೆ ವಿಧೇಯಳಾಗಿರಬೇಕು. ಇದನ್ನವನು ನ್ಯಾಯಾಲಯದಲ್ಲಿ ಕೇಳಬಹುದು. ಸಂಕ್ಷಿಪ್ತವಾಗಿ ಹೇಳುವುದಾದರೆ, ಗೃಹಿಣಿಯು ಇಪ್ಪತ್ನಾಲ್ಕು ಗಂಟೆಗಳ ಕಾಲ, ತನ್ನ ಜೀವಿತಾವಧಿಗೆ ಗಂಡನ ವಶದಲ್ಲಿರುವ ವೇತನ ಪಡೆಯದ ಶ್ರಮಿಕಳಾಗಿದ್ದಾಳೆ. ಇದರಲ್ಲಿ ಅವಳ ಲೈಂಗಿಕತೆ ಮತ್ತು ಮಕ್ಕಳಿಗೆ ಜನ್ಮ ನೀಡುವ ಸಾಮರ್ಥ್ಯ, ಅವಳ ಮನಸ್ಸು ಮತ್ತು ಭಾವನೆಗಳು ಸೇರಿಕೊಳ್ಳುತ್ತವೆ. ಇದೇ ಸಮಯದಲ್ಲಿ ತನ್ನ ಗಂಡ ಮತ್ತು ಮಕ್ಕಳಿಗೆ ಅಗತ್ಯವಾದ ಎಲ್ಲಾ ಕೆಲಸಗಳನ್ನೂ ಒತ್ತಾಯಕ್ಕಾಗಿ ಮಾಡುವ ಗುಲಾಮಳು ಹಾಗು ದಾಸಿಯೂ ಆಗಿರುತ್ತಾಳೆ. ಇದರಲ್ಲಿ ತನ್ನಲ್ಲಿ ಪ್ರೀತಿಯ ಭಾವನೆಗಳಿಲ್ಲದಾಗಲೂ ಅದನ್ನು ತೋರ್ಪಡಿಸಿಕೊಳ್ಳುವುದು ಕೂಡ ಸೇರಿಕೊಳ್ಳುತ್ತದೆ. ಇಲ್ಲಿ ಮಡದಿ ಪ್ರೀತಿಯಿಂದ ದುಡಿಯುತ್ತಾಳೆ ಮತ್ತು ಪ್ರೀತಿಯೇ ದುಡಿಮೆಯಾಗುತ್ತದೆ. ಈ ಪರಿಸ್ಥಿತಿ ಯಾವಾಗಲೂ ಅಸಹನೀಯವಾಗಿರುತ್ತದೆಂದೇನೂ ಅಲ್ಲ. ಆದರೆ ಅದು ಹಾಗಾಗುವುದಿಲ್ಲವೆಂದು ಭವಿಷ್ಯ ಹೇಳುವುದು ಸಾಧ್ಯವಿಲ್ಲ. (ಕ್ಲಾಡಿಯಾ ವೊನ್ ವರ್ಲ್‌ಹಾಫ್: 'ದಿ ಪ್ರಾಲಿಟೇರಿಯನ್ ಈಸ್ ಡೆಡ್'; ಲಾಂಗ್ ಲಿವ್ ದಿ ಹೌಸ್‌ವೈಫ್')"**

ಸಾಮಾಜದಲ್ಲಿ "ಶೂದ್ರರು" ಅಥವಾ "ಕೆಳಮಟ್ಟದ" ಶ್ರಮಿಕರು ಮಾಡುವುದನ್ನೇ ಮಹಿಳೆಯರು ವರ್ಗ ಅಥವಾ ಜಾತಿಗಳ ಭೇದವಿಲ್ಲದೆ ಕುಟುಂಬದಲ್ಲಿ ಮಾಡುತ್ತಾರೆ. ಪ್ರತಿಯೊಂದು ಕುಟುಂಬದಲ್ಲೂ ಮಹಿಳೆಯರು "ಶೂದ್ರರು", ಪುರುಷರು "ದ್ವಿಜರು" ಅಥವಾ "ಮೇಲ್ಜಾತಿ"ಗಳವರಾಗಿರುತ್ತಾರೆ. ಶ್ರೀಮಂತ ಅಥವಾ ಮೇಲ್ಜಾತಿಗಳವರ ಕುಟುಂಬಗಳಲ್ಲೂ ಮಹಿಳೆಯರು ಸೇವೆ ಮಾಡುವವರಾಗಿರುತ್ತಾರೆ. ಆದ್ದರಿಂದ ಅವರನ್ನು ಶೂದ್ರರಂತೆಯೇ "ಮೈಲಿಗೆ" "ಅಪರಿಶುದ್ಧ" ರೆಂದೂ. ಶ್ರೇಷ್ಠವಾದ ಧರ್ಮ ಮತ್ತು ಅಧ್ಯಾತ್ಮ, ಶಿಕ್ಷಣ ಮುಂತಾದವುಗಳ

ಸಾಧನೆಗಳಿಗೆ ಅನರ್ಹರೆಂದೂ ಪರಿಗಣಿಸಲಾಗುತ್ತದೆ. ಏಕೆಂದರೆ, ಕೆಳಮಟ್ಟದ ಉದ್ಯೋಗಗಳು ಮುಖ್ಯವಾದವು ಅಥವಾ ಮೌಲ್ಯಯುತವಾದುವೆಂದು ಭಾವಿಸಲಾಗುವುದಿಲ್ಲ. ಮಹಿಳೆಯರು ಮನೆಯಲ್ಲಿ ಮಾಡುವ ಕೆಲಸಗಳಿಗೆ ಸಂಪೂರ್ಣವಾಗಿ ವೇತನ ಅಥವಾ ಗುರುತಿಸುವಿಕೆಗಳೆರಡೂ ಇರುವುದಿಲ್ಲ; (ಅವುಗಳನ್ನೇ) ಮನೆಯ ಹೊರಗೆ ಮಾಡಿದಲ್ಲಿ ಅದಕ್ಕೆ ಕಡಿಮೆ ವೇತನ ದೊರೆಯುತ್ತದೆ.

ಮಹಿಳೆಯರ ಮನೆಯ ಹೊರಗಿನ ದುಡಿಮೆಯು ಸಾಮಾನ್ಯವಾಗಿ ಕುಟುಂಬದೊಳಗಿನ ಅವರ ದುಡಿಮೆಯ ವಿಸ್ತರಣೆಯಾಗುತ್ತದೆ. ಉದಾಹರಣೆಗೆ, ಮಹಿಳೆಯರು ನರ್ಸರಿ ಮತ್ತು ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರು ಅಥವಾ ದಾದಿಯರು ಮತ್ತು ಗಗನಸಖಿಯರಾಗಿ ಹೆಚ್ಚಿನ ಸಂಖ್ಯೆಯಲ್ಲಿ ದುಡಿಯುತ್ತಾರೆ. ಹಕ್ಕು, ಅಧಿಕಾರ ಮತ್ತು ನಿಯಂತ್ರಣಗಳನ್ನೊಳಗೊಂಡಿರುವ ಉದ್ಯೋಗಗಳನ್ನು ಪುರುಷರ ಉದ್ಯೋಗಗಳೆಂದೂ, ಆರೈಕೆ ಪೋಷಣೆ ಮತ್ತು ಸೇವೆಗಳನ್ನೊಳಗೊಂಡ ಉದ್ಯೋಗಗಳನ್ನು ಮಹಿಳೆಯರ ಉದ್ಯೋಗಗಳೆಂದು ಪರಿಗಣಿಸಲಾಗುತ್ತದೆ. **ಮಹಿಳೆಯರು ಮನೆಯಲ್ಲಿ ಉಪಯುಕ್ತರಾಗಿರುತ್ತಾರೆ**, ಮನೆಯ ಹೊರಗೂ ಉಪಯುಕ್ತರಾಗಿ ಮುಂದುವರೆಯುತ್ತಾರೆ. **ಪುರುಷರು ಮನೆಯಲ್ಲಿ ಅಧಿಕಾರ ಮತ್ತು ನಿಯಂತ್ರಣಗಳ ಸ್ಥಾನವನ್ನು ಹೊಂದಿದ್ದಾರೆ**. ಮನೆಯ ಹೊರಗೂ ಅದೇ ಸ್ಥಾನಗಳಲ್ಲಿ ಮುಂದುವರಿಯುತ್ತಾರೆ. ಪುರುಷರು ಉತ್ತಮ ಶಿಕ್ಷಣ, ಉತ್ತಮ ತರಬೇತಿಗಳನ್ನು ಪಡೆದುಕೊಳ್ಳುತ್ತಾರೆ. ಅವರು (ಮಹಿಳೆಯರಂತೆ) ದ್ವಿವಿಧದ ಕೆಲಸದ ಹೊರೆಯನ್ನು ಹೊರಬೇಕಾಗಿಲ್ಲ. ಅದ್ದರಿಂದ ಅವರ ವೃತ್ತಿನಕ್ಷೆ ಮಹಿಳೆಯರದಕ್ಕಿಂತ ಬಹಳ ಎತ್ತರದಲ್ಲಿರುತ್ತದೆ.

ಮಹಿಳೆಯರು ಮಾಡುವ ಪ್ರತಿಯೊಂದೂ ಪ್ರತಿಫಲವನ್ನು ನೀಡಲೇಬೇಕು; ಅದು ನಾವು ಉಸಿರಾಡುವ ಗಾಳಿಯಂತೆ ಉಚಿತವಾಗಿರಬೇಕು. ಇದು ಮಕ್ಕಳನ್ನು ಹುಟ್ಟಿಸುವುದಕ್ಕೆ ಮತ್ತು ಬೆಳೆಸುವುದಕ್ಕೆ ಮಾತ್ರ ಅನ್ವಯಿಸುವುದಿಲ್ಲ ; ವಿಧವಿಧದ ಮನೆಗೆಲಸ ಮತ್ತು ಕೂಲಿಕೆಲಸಗಳು, ಸಹೋದ್ಯೋಗಿಗಳಿಗೆ ತೋರುವ ಭಾವನಾತ್ಮಕ ಕಾಳಜಿ, ಸ್ನೇಹಪರತೆ, ಅರ್ಪಿತ ಮನೋಭಾವ, ಬೇರೆಯವರಿಗೆ ವಿನಿಯೋಗ ಮಾಡಲು ಸದಾ ಸಿದ್ಧವಾಗಿರುವಿಕೆ, ಎಲ್ಲಾ ಗಾಯಗಳ ಉಪಶಮನ, ಲೈಂಗಿಕ ಬಳಕೆಗೆ ನಿಲುಕುವಿಕೆ, ಎಲ್ಲದರ ಪುನರ್ವ್ಯವಸ್ಥೆ, ಜವಾಬ್ದಾರಿ ಪ್ರಜ್ಞೆ ಮತ್ತು ಸ್ವಾರ್ಥತ್ಯಾಗ, ಮಿತವ್ಯಯ ಮತ್ತು ಸೋಗಲಾಡಿತನವಿಲ್ಲದಿರುವಿಕೆ, ಇತರರಿಗಾಗಿ ತ್ಯಾಗ, ಎಲ್ಲವನ್ನೂ ಸಹಿಸಿಕೊಳ್ಳುವಿಕೆ ಮತ್ತು ಎಲ್ಲ ವಿಷಯಗಳಲ್ಲೂ ನೆರವು, ಹಿಂಜರಿಕೆ ಮತ್ತು ಅಗೋಚರತೆ ಮತ್ತು ಸದಾ ಹಾಜರು, ನಿಷ್ಕ್ರಿಯ ಜೀವ–ನಿಲುಕುವಂತಿರುವಿಕೆ, ಮಣ್ಣಿನಲ್ಲಿ ಹೂತುಹೋದ ಗಾಡಿ ಎತ್ತಿ ಎಳೆದೊಯ್ಯುವ ಸಕ್ರಿಯ ಜೀವಿ, ಸೈನಿಕನ ಸಹನೆ ಮತ್ತು ಶಿಸ್ತು–ಇವೆಲ್ಲಕ್ಕೂ ಅನ್ವಯಿಸುತ್ತದೆ. ಇವೆಲ್ಲವೂ ಹೆಣ್ತನದ ದುಡಿಮೆಯ ಸಾಮರ್ಥ್ಯವಾಗುತ್ತದೆ. (ಕ್ಲಾಡಿಯಾ ವೊನ್ ವರ್ಲ್‌ಹಾಫ್: 179)"

*(ಮುಂದುವರಿಯುವುದು)*

## ಠಾಕೂರ್ ಸಿಂಗ್ ಮತ್ತು ಚಾಕು

**ಫು**ಲ್‌ಪತ್ತಿದೇವಿ ಉತ್ತರ ಪ್ರದೇಶದ ಪೂರ್ವಭಾಗದಲ್ಲಿನ ಜಾನ್‌ಪುರ್ ಜಿಲ್ಲೆಯ ಒಂದು ಹಳ್ಳಿಗೆ ಸೇರಿದವಳು. 45 ವರ್ಷದ ದಲಿತ ವಿಧವೆ. ಆಕೆ ತನ್ನ ಮಗಳ ಮದುವೆಗಾಗಿ ಬ್ಯಾಂಕ್ ಸಾಲಕ್ಕಾಗಿ ಪ್ರಯತ್ನಿಸುತ್ತಿದ್ದಳು. ಠಾಕೂರ್ ದೇವೇಂದ್ರ ಸಿಂಗ್ ಆಕೆಗೆ ಬ್ಯಾಂಕ್‌ನಿಂದ ಸಾಲ ಕೊಡಿಸುವುದಾಗಿ ಭರವಸೆ ನೀಡಿ ಅದಕ್ಕಾಗಿ 10,000 ರೂ ಲಂಚ ನೀಡಬೇಕಾಗುತ್ತದೆಯೆಂದು, ಆಕೆಯಿಂದ ಹತ್ತು ಸಾವಿರ ರೂ.ಗಳನ್ನು ತೆಗೆದುಕೊಂಡ. ಆಕೆಗೆ ಸಾಲ ಪಡೆಯಲು ಸಾಧ್ಯವಾಗಲೇ ಇಲ್ಲ. ಹೇಗೊ ಕಷ್ಟಪಟ್ಟು ಆಕೆ ಹಣ ಹೊಂದಿಸಿ ಮಗಳ ಮದುವೆಯನ್ನು ಮಾಡಿದಳು. ಎರಡು ವರ್ಷ ಕಳೆದರೂ ಠಾಕೂರ್ ಸಿಂಗ್ ಆಕೆ ನೀಡಿದ ಹತ್ತು ಸಾವಿರ ರೂಗಳನ್ನು ವಾಪಸ್ ನೀಡಲೇ ಇಲ್ಲ. ಕೇಳಿದಾಗಲೆಲ್ಲಾ ಆತ ಏನೋ ಒಂದು ನೆಪ ಹೇಳಿ ತಪ್ಪಿಸಿಕೊಳ್ಳುತ್ತಿದ್ದ. ಕೆಲವೊಮ್ಮೆ ಬ್ಯಾಂಕಿಗೆ ಕರೆದುಕೊಂಡು ಹೋಗಿ ಕಾಯುವಂತೆ ಮಾಡುತ್ತಿದ್ದ, ಕಾಯಿಸುತ್ತಾ ಕತ್ತಲಾದ ಮೇಲೆ ದೂರದ ಹಳ್ಳಿಗೆ ನಡೆದುಕೊಂಡು ಹೋಗುವಂತೆ ಮಾಡುತ್ತಿದ್ದ. ಒಂದೆರಡು ಬಾರಿ ಹೀಗೆ ವಾಪಸ್ ಬರುವಾಗ ಆಕೆಯ ಮೇಲೆ ಅತ್ಯಾಚಾರ ಮಾಡಲು ಪ್ರಯತ್ನಿಸಿದ್ದ. ಆಕೆ ಹೇಗೊ ತಪ್ಪಿಸಿಕೊಂಡು ಸುರಕ್ಷಿತವಾಗಿ ಮನೆ ತಲುಪಿದ್ದಳು.

ಒಂದುದಿನ ರಾತ್ರಿ ಎಂಟುಗಂಟೆಗೆ ಈಕೆಯಮನೆಗೆ ಬಂದ ಠಾಕೂರ್, ಇನ್ನೆರಡು ದಿನದಲ್ಲಿ ಬ್ಯಾಂಕ್ ಸಾಲ ದೊರಕುವುದಾಗಿ ತಿಳಿಸಿದ. ಈ ವಿಷಯವನ್ನು ಬೆಳಿಗ್ಗೆ ಹೇಳಬಹುದಿತ್ತಲ್ಲ, ಈ ವೇಳೆಯಲ್ಲಿ ಮನೆಗೆ ಬಂದು ಹೇಳುವ ಅಗತ್ಯವಿರಲಿಲ್ಲವೆಂದು ಫುಲ್‌ಪತ್ತಿದೇವಿ ಖಾರವಾಗಿ ನುಡಿದಾಗ "ಇದೇ ದಾರಿಯಲ್ಲಿ ಹೋಗುತ್ತಿದ್ದೆ, ಈ ವಿಷಯ ನಿಮಗೆ ತಿಳಿದರೆ ಸಂತೋಷವಾಗಬಹುದೆಂದು ಬಂದೆ" ಎಂದೇ ಸಬೂಬು ನೀಡಿದ. ಮನೆಯಿಂದ ಸ್ವಲ್ಪ ದೂರವಿರುವ ಬೇವಿನಮರದವರೆಗೆ ಬರುವಂತೆ ಆಕೆಯನ್ನು ಕರೆದ. ಆಕೆಗೆ ಇಷ್ಟವಿರಲಿಲ್ಲ. ಆದರೆ ಮಕ್ಕಳು ಅವನು ನಮಗೆ ಸಾಲ ಕೊಡಿಸಲು, ಸಹಾಯ ಮಾಡಲು ಪ್ರಯತ್ನಿಸುತ್ತಿರುವಾಗ ನೀನು ಇಷ್ಟು ಒರಟಾಗಿರುವುದು ಸರಿಯಲ್ಲವೆಂದು ಒತ್ತಾಯಿಸಿದ್ದರಿಂದ ಆಕೆ ಬೇವಿನಮರದವರೆಗೆ ಆತನ ಜೊತೆಗೆ ನಡೆದಳು. ಬೇವಿನ ಮರದ ಹತ್ತಿರ ಆತ ಪುನಃ ಆಕೆಯ ಮೈಮುಟ್ಟಿ ಬಲಾತ್ಕಾರ ಮಾಡಲೆತ್ನಿಸಿದ. ಫುಲ್‌ಪತ್ತಿದೇವಿ ಈ ಬಾರಿ ಮಾನಸಿಕವಾಗಿ ತಯಾರಾಗಿದ್ದಳು. "ನೀನು ನನ್ನ ಮೇಲೆ ಬಲಾತ್ಕಾರ ಮಾಡಬೇಡ. ನಾನೇ ಇಚ್ಛೆಯಿಂದ ಒಪ್ಪಿ ಕೊಳ್ಳುತ್ತೇನೆ" ಎಂದು ನುಡಿದಳು. ಆತನಿಗೆ ಸಂತೋಷವಾಗಿ ಬಟ್ಟೆಯನ್ನೂ ಬಿಚ್ಚಿದ. ತಕ್ಷಣ ಫುಲ್‌ಪತ್ತಿ ದೇವಿ ತನ್ನ ಸೊಂಟದಲ್ಲಿದ್ದ ಚಾಕುವನ್ನು ತೆಗೆದು ಅವನ ಮರ್ಮಾಂಗವನ್ನು ಕತ್ತರಿಸಿದಳು. ಮರುದಿನ ಬೆಳಿಗ್ಗೆ ಆಕೆ, ಚಾಕು ಹಾಗೂ ಕತ್ತರಿಸಿದ ಮರ್ಮಾಂಗವನ್ನು ತೆಗೆದುಕೊಂಡು ಪೊಲೀಸ್ ಠಾಣೆಗೆ ಹೋಗಿ ತಾನೇ ಬಂಧಿತಳಾದಳು. ಕೆಲವು ದಿನಗಳ ನಂತರ ದೇವೇಂದ್ರಸಿಂಗ್ ಠಾಕೂರ್‌ನನ್ನು ಜೈಲಿಗೆ ಕಳಿಸಲಾಯಿತು.


ಠಾಕೂರರ ವಿರುದ್ಧ ಉಸಿರೆತ್ತಲೂ ಸಾಧ್ಯವಾಗದ ಸಂದರ್ಭದಲ್ಲಿ ಈ ಧೈರ್ಯ ನಿನಗೆ ಬಂದದ್ದಾದರೂ ಹೇಗೆಂದು ಪ್ರಶ್ನಿಸಿದರೆ, ಈಗ ಮಾಯಾವತಿ ಅಧಿಕಾರಕ್ಕೆ ಬಂದಿರುವುದರಿಂದ ಆಕೆ ನನ್ನನ್ನು ಕಾಪಾಡುತ್ತಾಳೆ ಎನ್ನುತ್ತಾಳೆ ಜೈಲಿನಲ್ಲಿರುವ ಫುಲ್‌ಪತ್ತಿದೇವಿ.

ಉತ್ತರ ಪ್ರದೇಶ, ಬಿಹಾರ ರಾಜ್ಯಗಳಲ್ಲಿನ ಕಾನೂನು ಅವ್ಯವಸ್ಥೆಯನ್ನು ಗಮನಿಸಿದರೆ ಈ ರಾಜ್ಯಗಳಲ್ಲಿ ಸರ್ಕಾರಗಳು ಅಸ್ತಿತ್ವದಲ್ಲಿ ಇವೆಯೇ ಎಂಬುದೇ ದೊಡ್ಡ ಪ್ರಶ್ನೆ. ಉತ್ತರ ಪ್ರದೇಶದಲ್ಲಿನ ಈ ಅವ್ಯವಸ್ಥೆಯೇ ಮಾಯಾವತಿಯ ಗೆಲುವಿನ ಸೂತ್ರಕ್ಕೆ ನಾಂದಿ ಹಾಡಿರಬೇಕು. ❑

# ಬಿತ್ತಾಕಿಗೇ ಗೊತ್ತು ಬೀಜದ ಗುಟ್ಟು

*ಸೌಜನ್ಯ : 'ಸಹಜ ಸಾಗುವಳಿ' ದ್ವೈಮಾಸಿಕೆ*

*(ಹಿಂದಿನ ಸಂಚಿಕೆಯಿಂದ)*



## ಗಂಡಸರ ದೇಹಕ್ಕೆ ಹೊಂದುವ ಸಲಕರಣೆಗಳು

ಕೃಷಿಯಲ್ಲಿ ಯಾವುದೇ ಒಂದು ಸಲಕರಣೆ ಮಾಡಬೇಕಾದರೆ ಗಂಡಸರ ದೇಹಕ್ಕೆ ಹೊಂದುವಂತೆ ಮಾಡಿರುತ್ತಾರೆ. ಮಹಿಳೆಯರ ದೇಹ ಅದಕ್ಕೆ ಒಗ್ಗಿಕೊಳ್ಳಲ್ಲ. ನೇಗಿಲು ಸಹ ಗಂಡಸರದ್ದೇ.

ನಾವು ಬಗ್ಗೋದಕ್ಕೂ ಅವರು ಬಗ್ಗೋದಕ್ಕೂ ವತ್ಯಾಸ ಇದೆ. ಬಗ್ಗೋ ಕೆಲಸ ಎಲ್ಲ ನಮ್ಮ ಮೇಲೆ ಬಿದ್ದಿದೆ. ಗಂಡುಮಕ್ಕಳಿಗೆ ಬಗ್ಗೋದು ಆಗಲ್ಲ. ನಾವು ಯಾವುದನ್ನೂ ಬಗ್ಗಿ ಬಾಗಿ ಮಾಡ್ತೀವಿ, ಅದಕ್ಕೆ ಎಲ್ಲ ನಮ್ಮ ಮೇಲೇ ಹೊರೆಬಿದ್ದಿದೆ.

ಉದಾಹರಣೆಗೆ, ಹೊರೆ ಎತ್ತಕ್ಕೆ ಗಂಡಸರು ನಮಗೆ ಸಹಾಯ ಮಾಡುತ್ತಾರೆ. ಅವರು ಹೊತ್ತುಕೊಂಡು ಹೋಗದಿಲ್ರಿ, ಬಗ್ಗಿ ಎತ್ತುವುದು ನಮಗೆ ಕಷ್ಟ ಆದರೆ ಎಷ್ಟು ಭಾರ ಇದ್ದರೂ ಹೊರತೀವಿ. ಆ ಪ್ರಕಾರವಾಗಿ ಹೆಂಗಸರನ್ನ ಅರ್ಥ ಮಾಡಿಕೊಂಡು ಯಂತ್ರಗಳನ್ನು ಮಾಡಿಲ್ಲ. ಮಾಡಿದ್ದರೆ ಹೆಂಗಸರೂ ಯಂತ್ರಗಳನ್ನು ಒಪ್ಪಿಕೊಳ್ಳುತ್ತಿದ್ದರು. ಮತ್ತೆ ಗಂಡಸರ ದೇಹನೂ ಬಿಗಿ ಇರುತ್ತೆ. ನಾವು ಬಸರಿ ಅಂತ ಹೊತ್ತು ಹೆರಿಗೆ ಆದಮೇಲೆ ನಮ್ಮ ದೇಹ ಸಾಕಷ್ಟು ಲೂಸ್ ಆಗಿರುತ್ತೆ. ಅಂಥ ದೇಹಕ್ಕೆ ಹೊಂದಿಕೊಳ್ಳುವಂಥ ಯಂತ್ರ ಮಾಡಬೇಕು ತಾನೆ, ಅದನ್ನ ಮಾಡಿಲ್ಲ.


ಒಂದು ರೀತಿಯಲ್ಲಿ ನಮ್ಮ ಮನಸ್ಸಿನ ಯಂತ್ರವನ್ನೇ ನಾವು ಮಾಡಬೇಕು (ನಗು). ನನಗೆ ಮನಸ್ಸಿದೆ, ಆದರೆ ಹತ್ತಿ ಬಿಡಿಸುವ ಕಷ್ಟ ಹೇಗೆ ಕಡಿಮೆ ಮಾಡಬೇಕು? ವಿಜ್ಞಾನಿಗಳು ಯಂತ್ರಗಳನ್ನು ಕಂಡು ಹಿಡಿದರು, ಅದೆಲ್ಲ ನಮಗೆ ಉಪಯೋಗ ಆಗಲಿಲ್ಲ. ಎಲ್ಲಿ ನಾವೇ ಮಾಡಿಕೊಂಡೆವೋ ಅದು ನಮಗೆ ಉಪಯೋಗ ಆಗಿದೆ. ನಾವಿಷ್ಟು ಜನ ಹೆಂಗಸರು ಇಲ್ಲಿ ಕುಳಿತಿರುವಾಗ ನಮ್ಮಿಂದ ಏನಾದರೂ ಒಂದು ಉಪಾಯ ಬಂದರೆ ಅದರಿಂದ ಆಗಬಹುದೇ ವಿನಃ ಬೇರೆ ಯಾರೋ ಮಾಡಿ ಸಾಧ್ಯವಿಲ್ಲ.

ಪ್ರಯೋಗ ಪರಿವಾರ ಅಂದರೆ ಬರೀ ಹುಳ ಕೀಟ ಮಾತ್ರ ಅಲ್ಲ. ಈ ಕಷ್ಟಗಳಿಗೆ ಪರಿಹಾರ ಕಂಡುಕೊಳ್ಳದು ಮುಖ್ಯ. ಇವತ್ತು ಚರ್ಚೆ ಮಾಡಿದ್ದನ್ನ ಕೃಷಿಯಲ್ಲಿ ಮಹಿಳೆಯರ ಸಮಸ್ಯೆಗಳು ಏನು ಎಂಬುದನ್ನು ಪ್ರಯೋಗ ಪರಿವಾರದಲ್ಲಿ ಮಂಡಿಸಬೇಕು. ಆಗ ತಮ್ಮ ಮನೆಯಲ್ಲಿ ಹೆಂಗಸರನ್ನ ಕೃಷಿ ಸಂಘಕ್ಕೆ ಕಳಿಸುವುದನ್ನು ನಿಲ್ಲಿಸಿಬಿಡಬಹುದು (ನಗು). ಆದರೆ ನಾವೇನೂ ಇಲ್ಲಿ ಗಂಡಸರ ವಿರುದ್ಧ ಯಾವದನ್ನೂ ಹೇಳುತ್ತಿಲ್ಲವಲ್ಲ. ನಾವು ಕೃಷಿಯಲ್ಲಿ ಹೆಚ್ಚಿನ ಆಸಕ್ತಿ ತೆಗೆದುಕೊಳ್ಳುತ್ತಿದ್ದೀವಿ. ಈ ರೀತಿ ಸಮಸ್ಯೆಗಳಿವೆ, ಇದನ್ನ ಪ್ರಯೋಗ ಪರಿವಾರದಲ್ಲಿ ನಾವು ಇಡಕ್ಕೆ ಇಷ್ಟಪಡುತ್ತೀವಿ. ಇದೆಲ್ಲ ಪರಿಹಾರ ಸಿಗದ ಸಮಸ್ಯೆಗಳಲ್ಲ.

ಗಂಡಸುಮಕ್ಕಳು ನಾವೂ ಹತ್ತಿ, ಶೇಂಗಾ ಬಿಡಸ್ತೀವಿ ಅಂತಾರ. ಕೆಲವರ ಮನ್ಯಾಗೆ ಮಾಡ್ತಾರ. ಕೆಲವರ ಮನೆಗೆ ಮಾಡಂಗಿಲ್ರಿ, ನೂರಕ್ಕೆ 10 ಮಂದಿ ಗಂಡಸುಮಕ್ಕಳು ಮಾಡಬಹುದು. 90 ಮಂದಿ ಮಹಿಳೆಯರೇ ಮಾಡುವುದು. ಬಗ್ಗಿ ಮಾಡಬೇಕಲ್ಲ. ಅದು ಅವರಿಗೆ ಕಷ್ಟ.

## ಪ್ರಯೋಗ ಪರಿವಾರ ನಮಗೇನು ಕೊಟ್ಟಿದೆ

ನಮ್ಮ ಸಂಘಗಳಲ್ಲಿ ಕುಂತು ಮತನಾಡಿದರೆ ನಮ್ಮ ನಮ್ಮ ವಿಷಯಗಳು ಅಷ್ಟೆ ಮನದಟ್ಟಾಗದು. ಪ್ರಯೋಗ ಪರಿವಾರಕ್ಕೆ ಹೋಗುವುದರಿಂದ ಸುತ್ತ ಮುತ್ತಲ ಹಳ್ಳಿ ಜನ ಮಾಡಿದ ಪ್ರಯೋಗಗಳೆಲ್ಲ, ಒಂದು ಒಳ್ಳೇದು, ಒಂದು ಫೇಲಾಗಿದ್ದು, ಒಂದು ಬೀಜ ಮಾಡಿದ್ದು, ಒಂದು ರೋಗದ ಬಗ್ಗೆ, ಕೀಟದ ಬಗ್ಗೆ ಎಲ್ಲ ಒಬ್ಬರಿಂದ ಒಬ್ಬರಿಗೆ ತಿಳಿಯುತ್ತೆ. ಅಲ್ಲಿ ಎಲ್ಲ ತಾವು ಮಾಡಿದ ಪ್ರಯೋಗಗಳನ್ನ ಹೇಳ್ತಾರಲ್ಲ. ಅಲ್ಲಿಂದ ಬಂದಮೇಲೆ ನಾವೇ ಮತ್ತೊಂದು ಹೊಸ ಪ್ರಯೋಗ ಮಾಡುತ್ತೇವೆ. ಉದಾಹರಣೆಗೆ ನಾನು(ಕೊಟ್ರಮ್ಮ) ಮೆಣಸಿನ ಕಾಯಿ+ಬೆಳ್ಳುಳ್ಳಿ ಕಸಾಯ ಮಾಡಿದ್ದೆ, ಶೇಂಗಾದ ಹಸಿರುಳಕ್ಕೆ ಹೊಡೆಯಕ್ಕೆ. ಸೋಸಿದ ಚರಟ ಉಳಿದಿತ್ತು. ಕಷ್ಟಪಟ್ಟು ಮಾಡಿದ್ದೆನಲ್ಲ, ಅದನ್ನ ಯಾಕೆ ಎಸೀಬೇಕು? ಅದನ್ನ ತ್ರಿಮೂರ್ತಿ ಟಾನಿಕ್‌ನಲ್ಲಿ ಬೆರೆಸಿಬಿಟ್ಟೆ, "ನೀವು ಹಿಂಗ್ ಬೆರೆಸಿಬಿಟ್ರಲ್ಲ ಏನಾರ ಹೆಚ್ಚು ಕಡಿಮಿ ಆದರೆ" ಅಂತ ಎಲ್ಲ ಗಡಿಬಿಡಿ ಮಾಡಿದರು. ನಾನು ಮೂರು ಸಲ ಕಶಾಯ ಹೊಡೆದಿದ್ದ ಚರಟವನ್ನೂ ತ್ರಿಮೂರ್ತಿ ಟಾನಿಕ್‌ನಾಗ ಬೆರೆಸಿದ್ದೀನ್ರಿ, ಅದನ್ನೇ ಹೊಲದಾಗ ಹಾಕಿದ್ದೀನಿ. ಅದನ್ನ ಹಾಕಿದ ಮೇಲೆ ಶೇಂಗಾ ಇನ್ನೂ ಚನ್ನಾಗೇ ಬಂತು ಅನ್ನುಸ್ತು. ಇದನ್ನ ನಾನು ಹೊಸ್ದಾಗಿ ಕಂಡು ಹಿಡಿದಿರದು.



ಪ್ರಯೋಗ ಪರಿವಾರದಲ್ಲಿ ವಿಷಯ ಮಂಡನೆ

ಪ್ರಯೋಗ ಪರಿವಾರಕ್ಕೆ ಹೋಗೋದ್ರಿಂದ ಒಂದನ್ನ ಮಾಡಿದ್ದಕ್ಕೆ ಇನ್ನೊಂದನ್ನ ಮಾಡುವ ಧೈರ್ಯ ಬರುತ್ತೆ. ಯಾರೋ ಒಂದನ್ನ ಹೇಳ್ತಾರೆ-ನಾನು ಅದನ್ನ ಇನ್ನೊಂದು ರೀತಿ ಯಾಕೆ ಮಾಡಿ ನೋಡಬಾರದು ಅಂತ ಮಾಡ್ತಿನಿ. ನಾವು ಹುಡಕಬೇಕು. ಆ ಮನೋಭಾವನೆ ಬರ್ತಾ ಇದೆ. ಒಂದೊಂದೇ ವಿಧಾನ ಮಾಡ್ತಾ ಮಾಡ್ತ ನಮಗೆ ಅದೆಲ್ಲ ಮನದಟ್ಟು ಆಗ್ತಾವ. ನಾವು ಹೊಲದಲ್ಲಿ ಓಡ್ಯಾಡ್ತಾ ಯಾವ ಹೊಲದಲ್ಲಿ ಏನಾಗೇತಿ. ಯಾರು ಏನು ವಿಧಾನ ಮಾಡಿದ್ದರು ಅದೆಲ್ಲ ಈಗ ಗಮನಿಸ್ತೀವಿ.

ಇವರು (ಕೊಟ್ರಮ್ಮ) ಸಣ್ಣತೆನೆ ಬಿಳಿಜೋಳ ಬಿತ್ತಿದ್ರು. ನಾನು (ನಿರ್ಮಲ) ಅಲ್ಲಿ ಓಡಾಡ್ತಿದ್ದಿ. ನಾವು ಸರ್ಕಾರಿ ಗೊಬ್ಬರ ಹಾಕಿ ಬೆಳೆದಾಗ ಬಿಳಿಜೋಳ ಹೋಗಿಬಿಡ್ತು. ಇವರು ಜೀವಾಮೃತ ಕೊಟಗೋತಾ ಹೋದವರಿಗೆ ಇಷ್ಟಿಷ್ಟು ತೆನೆ ಇದ್ದವು. ಎಲ್ಲ ತೆನೆಗೂ ಕಾಳಾಗ್ಯಾವು ಇವರದ್ದು. ಎಲ್ಲ ಗಿಡಕ್ಕೂ ತೆನಿ, ಎಲ್ಲ ತೆನಿಗೂ ಕಾಳು. ಸೊಪ್ಪಿ ಹಚ್ಚಗ ಇತ್ತು. ಬುಡಸು ರೋಗನು ಇವರದರಲ್ಲಿ ಕಮ್ಮಿ ಅನ್ನಿಸ್ತು.

ಮತ್ತೆ ಪ್ರಯೋಗ ಪರಿವಾರದ ಸಭೆಗಳಲ್ಲಿ ನೂರಾರು ಜನರ ಮುಂದ ನಾವು ವಿಷಯ ಮಂಡನೆ ಮಾಡ್ತೇವು. ಮೊನ್ನೆ ಶೇಂಗಾ ಬೆಳೆ ಗುಂಪಿನ ಪ್ರಯೋಗದ ವಿಷಯ ಮಂಡನೆ ನಾವೆ ಮಾಡಿದ್ದು. ಇದರಿಂದ ನಮಗೆ ಧೈರ್ಯ, ಆತ್ಮವಿಶ್ವಾಸ ಎಲ್ಲಾ ಬರುತ್ತದೆ.

## ಸಾವಯವಕ್ಕೆ ಬಂದು ಕೃಷಿ ಪ್ರೀತಿಸುವಂತಾಯ್ತು

ರಾಸಾಯನಿಕ ಔಷ್ದಿಗಳನ್ನ ದುಡ್ಡು ಕೊಟ್ಟು ತರುತ್ತಾರೆ. ಇದಾದರೆ ಸ್ವಲ್ಪ ಹೆಚ್ಚಾದರೂ ನಡೆಯುತ್ತೆ ಅನ್ನೋ ಭಾವನೆ ಇರುತ್ತೆ. ಅದಾದರೆ ಮತ್ತೆ ತರಕ್ಕೆ ದುಡ್ಡಿರಲ್ಲ. ಇದಾದರೆ ಇನ್ನೊಂದು ಸಲ ಮಾಡಿ ನೋಡನು ತಡೀರಿ ಅನ್ನೋದಿರುತ್ತೆ. ತ್ರಿಮೂರ್ತಿ ಟಾನಿಕ್ ಕೊಡನು, ಜೀವಾಮೃತ ಕೊಡನು ಅಂತ ಮುಂದಾಗ್ತೀವಿ. ಮತ್ತೆ ಇದನ್ನ ಮಕ್ಕಳು ಮರಿ ಬಾಯಾಗ ಹಾಕಿಕೊಂಡರೂ ಏನೂ ಭಯ ಇಲ್ಲ. ನಮಗೆ ಮುಂಚಿನಿಂದಲೂ ಕೃಷಿಯ ಮೇಲೆ ಪ್ರೀತಿ ಇತ್ತು, ರಸಾಯನಿಕ ಕೃಷಿಯಿಂದಾಗಿ ಅದನ್ನ ತೋರ್ಪಡಿಸಲು ಆಗುತ್ತಿರಲಿಲ್ಲ. ದೂರ ಉಳಿಯೋ ಪರಿಸ್ಥಿತಿ ಬಂದಿತ್ತು. ಮಗು ಎಷ್ಟು ಚನ್ನಾಗಿದೆ, ನಮ್ಮದೇ ಮಗು, ಆದರೂ ಮುದ್ದಾಡಕ್ಕೆ ಆಗ್ತಾ ಇರಲಿಲ್ಲ. ಸಾವಯವ ಕೃಷಿಗೆ ಬಂದಿದ್ದರಿಂದ ಆ ಪ್ರೀತಿ ಮತ್ತೆ ತೋರ್ಪಡಿಸಲು ಸಾಧ್ಯವಾಗುತ್ತಿದೆ. ಇಲ್ಲಿ ಎಲ್ಲವನ್ನ ನಮ್ಮ ಕಯ್ಯಾರ ಮಾಡಿರುತ್ತೀವಲ್ಲ, ಪ್ರೀತಿ ತಂತಾನೆ ಬರುತ್ತೆ.

ಮುಂಚೆ ಹೊಲದಲ್ಲಿ ಕಸಕಡ್ಡಿ ಅಂತ ಆರಿಸಿ ಎಸೀತಿದ್ದೆವು. ಈಗ ಅದರಿಂದ ಹೊದಿಕೆ ಮಾಡಿದರೆ ಚನ್ನಾಗಲ್ಲ ಅಂತ ನೋಡ್ತೀವಿ. ಲಕ್ಕಿ ಎಲ್ಲ ಕಿತ್ತು ಎಸೀತಿದ್ವಿ. ಅದು ಔಷಧಕ್ಕೆ ಬರತೈತಿ ಅನ್ನದು ಈಗ ತಿಳಿದೈತಿ. ನಮ್ಮ ಸುತ್ತ ಮುತ್ತ ನಮ್ಮ ಕೈಗೆ ಸಿಕ್ಕೋ ವಸ್ತುಗಳನ್ನ ಉಪಯೋಗಿಸಿ ಮಾಡ್ಬೇಕು ಅನ್ನುವುದು ಮನದಟ್ಟಾಗಿದೆ. ಕೊಳೆತ ಟೊಮಟೋ ಇದ್ದರು ತ್ರಿಮೂರ್ತಿ ಟಾನಿಕ್ಕಲ್ಲಿ ಹಾಕ್ತೀವಿ. ಯಾವುದೂ ಬಿಸಾಡೋ ಅಂತದ್ದು ಇಲ್ಲ ಅನ್ನದು ಮನದಟ್ಟಾಗಿದೆ.

## ನಮ್ಮ ಹಳ್ಳಿಗಳಲ್ಲಿ ಸಾವಯವ ವಾತಾವರಣ

ನಮ್ಮ ಊರಲ್ಲಿ (ಚಪ್ಪರದಹಳ್ಳಿ) ಮೂರು ಮಹಿಳೆಯರ ಸಂಘ, ಮೂರು ಪುರುಷರ ಸಂಘ, ಒಂದು ಯುವಕರ ಸಂಘ ಮಾಡಿದ್ದೇವೆ. ದೂಪದಹಳ್ಳಿಯಲ್ಲಿ 6 ಸಂಘಗಳಿವೆ. ಬೇರೆ ಗ್ರಾಮಗಳಲ್ಲಿ ಹೆಚ್ಚು ಪುರುಷರ ಸಂಘಗಳೇ. ಕಂಪೋಸ್ಟ್ ಮಾಡಬೇಕಾದರೆ ಗಂಡು ಮಕ್ಕಳು ಎಷ್ಟು ಮಾಡ್ತಾರೋ ಅಷ್ಟೇ ನಾವೂ ಮಾಡಿದ್ದೆವು. ತೊಪ್ಪಲು ತರದು, ಪುಟ್ಟೀಲಿ ಮಣ್ಣು ತುಂಬಿಕೊಂಡು ಬರದು ಎಲ್ಲ ನಾವೆ. ಹಿಂದಿನ ವರುಷ ನಾವೇ ಹೆಣಮಕ್ಕಳು ಸಂಘ ಮಾಡಿದ್ದು ಮೊದಲು. ಆಗ ತುಂಬಾ ಕಷ್ಟ ಪಟ್ಟಿದ್ದೇವೆ. ಒಬ್ಬರು ಕಂಪೋಸ್ಟ್ ಮಾಡಬೇಕಾದರ ನಾವು 4 ಮಂದಿ ಮಹಿಳೆಯರು ಹೋಗ್ತಾ ಇದ್ದೆವು. ಗಂಡು ಮಕ್ಕಳು ಇರ್ತಾ ಇರಲಿಲ್ಲ. ಎಲ್ಲ ನಾವೇ ಮಾಡ್ತಾ ಇದ್ದೆವು. ಈಗ ಹಂಗಲ್ಲ, ಅವರವರದ್ದು ಅವರವರು ಮಾಡಿಕೋತಾರ. ಈಗ ಮನಿಮಂದಿ ಎಲ್ಲ ಬಂದು ಸೇರ್ತಾರ ಕಂಪೋಸ್ಟ್ ಮಾಡಬೇಕಾದರೆ. ಮೊದಲ ಸಲ ನಾವು ಪಟ್ಟಷ್ಟು ಕಷ್ಟ ಈಗ ಮಾಡುತ್ತಿರುವವರಿಗೆ ಇಲ್ಲ. ಈಗ ಎಲ್ಲ ಹೊಲದಲ್ಲಿ ಬದುಗಳು ಮಾಡಕ್ಕೆ ಹತ್ತಿಬಿಟ್ಯಾರ.

ನಾವು ಅನೇಕರು ಕೃಷಿ ಗುಂಡಿ ಮಾಡಿದ್ದೀವಿ. ಈ ಸಲ ಒಳ್ಳೆ ಬೆಳೆ ಬರಬಹುದು ಅನ್ನೋ ಭರವಸೆ ಅದ. ಈಗ ಸಂಘದವರ ಎಲ್ಲರ ಮನೆಯಲ್ಲೂ ಕಂಪೋಸ್ಟ್ ಅಥವಾ ಎರೆಹುಳು ಗೊಬ್ಬರ ರೆಡಿ ಇದೆ. ಕಂಪೋಸ್ಟ್ ಗುಂಡಿಗೆ ವಾರ ವಾರ ತ್ರಿಮೂರ್ತಿಟಾನಿಕ್ ಹಾಕತೀವಿ.

ಕಳೆದ ವರ್ಷ ಸ್ವಲ್ಪ ಜಮೀನಲ್ಲಿ ಮಾಡಿದ್ದವರು ಈ ಸಲ ಹೆಚ್ಚು ಮಾಡುತ್ತಿದ್ದೇವೆ. ರಾಸಾಯನಿಕ ಗೊಬ್ಬರ ಕೊಟ್ಟು ಕೊಟ್ಟು ಮಣ್ಣಿಗೆ ಜ್ವರ ಬಂದಂಗೆ ಆಗದ. ಅದಕ್ಕೆ ಕಂಪೋಸ್ಟ್ ಎಲ್ಲ 3 ವರ್ಷ ಬಿಡದೆ ಕೊಟ್ಟರೆ ತಾಕತ್ತು ಬಂದಂಗೆ ಆಗತ್ತ. ನಮಗೆ ಬೆಳೆ ಉನ್ನತ ಆಗಿ, ನಮ್ಮ ಬೆಳೆ ನಮಗೆ ಕೈಗೆ ಸಿಕ್ಕಿದರೆ ನಮಗೆ ಎಷ್ಟು ಕಷ್ಟ ಇದ್ದರೂ ನೀರಾಗಿ ಹೋಗುತ್ತೆ. ಕೈತುಂಬಾ ಬೆಳೆ ಬಂದಾಗ ನಮ್ಮ ಮನಸ್ಸು ಬಹಳ ನೆಮ್ಮದಿ ಆಗತ್ತೆ.

## ಯುವಕರಲ್ಲಿ ಮೂಡಿದ ಆಸಕ್ತಿ

ನಮ್ಮ ಹುಡುಗರುಗಳು ಕೃಷಿ ಬಿಟ್ಟು ಹೋಗ್ತಾ ಇದ್ದಾರೆ. ಅವರು ಕೃಷಿ ಇಷ್ಟ ಪಡ್ತಾ ಇಲ್ಲ. ಓದಿದವರೆಲ್ಲ ಅಂಗಡಿಗಳಿಗೆ ಹೋಗದು, ಲೆಕ್ಕ ಬರಿಯಕ್ಕ. ಓದದವರೆಲ್ಲ ಬೇರೆಯವರ ಕೆಲಸಕ್ಕೆ ಹೋಗದು. ಬೆಂಗಳೂರು ಕಡೆ ಫ್ಯಾಕ್ಟರಿಗಳಿಗೆ ಹೋಗದು.

ನಮ್ಮ ಮನಿಮಕ್ಕಳಿಗೆ ಈಗ ಕೃಷಿಯಲ್ಲಿ ಹಿಂದಿಗಿಂತ ಆಸಕ್ತಿ ಬಂದಿದೆ.



ರಸಾಯನಿಕ ಮಾಡಬೇಕಾದರೆ ಗೊಬ್ಬರ ತರಬೇಕು, ಬೀಜ ತರಬೇಕು ಅಂತ ಓಡೋಗದೆ ಈಗ ಸಾವಯವದಲ್ಲಿ ಗೊಬ್ಬರ ಇಲ್ಲೇ ಐತಿ, ಬೀಜ ಇಲ್ಲೆ ಐತಿ ಅಂತ ಅವಗೆ ಸ್ವಲ್ಪ ನೆಮ್ಮದಿ ಆತು. ಈಗ ಹುಡುಗರೆಲ್ಲ ತಿಪ್ಪೆ ಕೊಚ್ಚತಾರ, ನೀರು ಹಾಕತಾರ. ನಾವೀಗ ಹೊರಗೆ ಬಂದರೆ ಅವರು ಮನಿ ಕಡಿ ನೋಡತಾರ.

ಸಾವಯವ ಶೇಂಗಾ ಹುರದಾಗ ತಿನ್ನತಾರಲ್ಲ ಅದನ್ನ ನೋಡಿ ಅವರಿಗೆ ಗೊತ್ತಾಗುತ್ತೆ. ನಾವು ಕಂಪೊಸ್ಟ್ ಹಾಕಿ ಬೆಳೆದ ಶೇಂಗಾ ಎಣ್ಣೆ ಅಂಶ ಬಹಳ. ಮಿಕ್ಸಿಯಲ್ಲಿ ಹಾಕಕ್ಕಾಗಲ್ಲ, ಒರಳಲ್ಲಿ ಕುಟ್ಟಕ್ಕಾಗಲ್ಲ ಅಷ್ಟು ಎಣ್ಣೆ. ರಾಸಾಯನಿಕದ್ದು ಪುಡಿ ಪುಡಿಯಾಗುತ್ತೆ, ಅಂದರೆ ಎಣ್ಣೆ ಅಂಶ ಇರದಿಲ್ಲ.

ಈಗ ಸಾವಯವ ಬಂದಮೇಲೆ ಎಲ್ಲರೂ ಸ್ವಲ್ಪ ಕಷ್ಟ ಪಡ್ತಾ ಇದ್ದಾರ. ಕಾಲು ಭಾಗ ಅಂತೂ ಬಹಳ ಆಸಕ್ತಿ ತೋರಸ್ತಿದ್ದಾರ. ಬೇರೆ ಕಡೆ ನೋಡಿ ಸಲ್ಪ ಉತ್ಸಾಹ ಬರ್ತಾ ಇದೆ ಅನ್ನಿಸ್ತೈತಿ. ಈಗ ಗೊಬ್ಬರ ಎಲ್ಲ ಮಾಡಿಕೊಂತಾ ಅದಾರ. ಹಿಂದಿನ ವರ್ಷಕ್ಕೂ ಈ ವರ್ಷಕ್ಕೂ ಎಷ್ಟೋ ಸುಧಾರಣೆ ಆಗಿದೆ.

ಹಿಂದಿನ ವರ್ಷ ನಾವು ಮಹಿಳೆಯರೇ ಮಾಡಿದ್ದು ಮೊದಲು. ಈಗ ಎಲ್ಲ ನಾವೂ ಮಾಡನ ಅಂತ ಹೊರಟ್ಯಾರ. ಛಲ ಕೂಡ ಬಂದಿದೆ. ಎಲ್ಲ ಮನೆಗೊಬ್ಬರು ಮಾಡ್ಯಾರೆ ನೋಡಿ ಈಗ. ಕಂಪೊಸ್ಟ್, ಎರೆಹುಳು ತೊಟ್ಟಿ, ಬದು ಎಲ್ಲ. ಅವರು ಮಾಡುತಾರ ಅಂದ್ರ ನಾವೂ ಮಾಡಾನಂತಾರ. ಹೆಂಗಸರು ಇಷ್ಟು ಮಾಡ್ಯಾರಲ್ಲ, ನಾವು ಯಾಕೆ ಮಾಡಬಾರದು ಅಂತ.

ಎರೆಹುಳು ತೊಟ್ಟಿ ಹುಡುಗರುಗಳಿಗೆ ಬಹಳ ಆಕರ್ಷಣೆ ಆಗಿದೆ. ನಾವು ಎರೆಹುಳು ಗೊಬ್ಬರದಿಂದ ಹಂಗೈತಿ, ಹಿಂಗೈತಿ ಅಂತ ಹೇಳಕೊಂತ ಬಂದದ್ದು ಈಗ ಕಣ್ಣಾರೆ ನೋಡ್ಯಾರ. ಖರ್ಚು ಕಡಿಮೆ. ಗೊಬ್ಬರ ಟೀ ಪುಡಿ ಥರ ಬರುತ್ತೆ. ಇಷ್ಟು ಚನ್ನಾಗಿ ಗೊಬ್ಬರ ಆದರೆ ಯಾಕೆ ಮಾಡಬಾರದು ನಾವು. ಮುಂದೆ ಸ್ವಲ್ಪ ಗೊಬ್ಬರ ಮಾರಾಟ ಮಾಡಬಹುದು ಅಂತಲೂ ಅವರ ಮನಸ್ಸಿಗೆ ಬಂದಿದೆ.

ಈಗ ಟಿ.ವಿ., ಪೇಪರಲ್ಲಿ ಕೃಷಿ ಬಗ್ಗೆ ಹೆಚ್ಚಾಗಿ ಬರೋದ್ರಿಂದ ಅವರಿಗೆ ಆಸಕ್ತಿ ಜಾಸ್ತಿ ಆಗಿದೆ. ಪೇಪರು ಓದ್ತಾರ. "ನೋಡ್ರಾ, ಆ ಕಡಿ ದ್ರಾಕ್ಷಿ ಬರೋಬ್ಬರಿ ಬೆಳೆದು ಬಿಟ್ರಂತೆ ಸಾವಯವದಲ್ಲಿ" ಹಿಂಗೆ ಒಬ್ಬರಿಗೊಬ್ಬು, ಹೇಳಕೊಂತಿರ್ತಾರ. ಮುಂಚೆ ಎಲ್ಲ ಪೇಪರು ನೋಡ್ತಾ ಇರಲಿಲ್ಲ. ಈಗ ಊರಲ್ಲಿ ಪೇಪರು ತರಿಸೋರು ಎಲ್ಲಿರ್ತಾರೇನೋ, ನೋಡವ್ರು ಜಾಸ್ತಿ ಆಗ್ಯಾರ. ಪೇಪರು ಹಾಕಿಸ್ತರಲ್ಲ ಅವರ ಮನೆಗೆ ಹೋಗಿ ಓದ್ತಾರೆ. ಬೇರೆಯವರಿಗೆ ಓದಿದ್ದನ್ನ ಹೇಳ್ತಾರ. ರೇಡಿಯೋದಲ್ಲಿ, ಟಿ.ವಿಯಲ್ಲಿ ಕೃಷಿ ಬಗ್ಗೆ ಬಂತು ಅಂದರೆ ನಾವು ತೆಗೆದು ಚಿತ್ರ ಗೀತೆ ಇಡುತ್ತಿದ್ದೆವು. ಈಗ ಬರುತ್ತಾ ಅಂತ ಕಾಯ್ತಾರು.

## ಮುಂದಕ್ಕೆ ಏನು?

ಇಷ್ಟು ಸಂಘಗಳು ಮಾಡಿಕೊಂಡಿದ್ದೇವೆ. ಕಳೆದ ವರ್ಷ ನಮಗೆ ಶೇಂಗಾ, ಜಯಧರ ಹತ್ತಿ, ಜೋಳ, ಉಳ್ಳಾಗಡ್ಡಿ, ಸೂರ್ಯಕಾಂತಿ ಎಲ್ಲದರಲ್ಲೂ ಸಾವಯವ ಕೃಷಿಯಲ್ಲಿ ಒಳ್ಳೇ ಫಲಿತಾಂಶ ಬಂದಿದೆ. ಈ ವರ್ಷ ಎಲ್ಲರೂ ಮಾಡಬೇಕು. ಮಾಡಿ ಎಲ್ಲರ ಫಲಿತಾಂಶ ನೋಡಬೇಕು. ನಾವು ನಾವೆ ಹಂಚಿಕೋಬೇಕು. ಕಳೆದ ವರ್ಷ ಶೇಂಗಾದಲ್ಲಿ ಕೆಲ ಹೊಸ ತಳಿ ಹಾಕಿದ್ದೆವು. ಧಾರವಾಡದಿಂದ ತರಿಸಿದ್ದು, ಅದರಲ್ಲಿ ಜೆ.ಎಲ್-24 ಚನ್ನಾಗಿ ಬಂದಿದೆ. ಈ ವರ್ಷ ಇನ್ನೂ ಹೆಚ್ಚಿನ ಬೀಜಗಳನ್ನ ಹಾಕಬೇಕು. ಹಳೆ ಬೀಜ 25-30 ವರ್ಷದ ಹಿಂದಿನ ಬೀಜಗಳು ಸಿಕ್ಕರೆ ಯಾರಾದರೂ ಕೆಲವರು ಬೆಳೆದು ಹೆಚ್ಚಿಗಿ ಮಾಡಿ ಕೊಳ್ಳಬೇಕು.

ಹಿಂದಿನ ವರ್ಷ ನಾವು ಸೂರ್ಯಕಾಂತಿಗೆ ಅಂಗಡಿ ಗೊಬ್ಬರ ತರಲಿಲ್ಲ. ಸಾವಿರಾರು ರೂಪಾಯಿ ರೊಕ್ಕ ಉಳಿತು. ಇಳುವರಿನೂ ಚನ್ನಾಗೇ ಬಂತು. ಸೂರ್ಯಕಾಂತಿಗು ಲಕ್ಕಿ ಸೊಪ್ಪಿನ ಔಷಿಧೀ ಹೊಡೆದಿದ್ದು. ಈ ವರ್ಷ ಏನಾರ ಮಳೆ ಚನ್ನಾಗಾಗಿ ಶೇಂಗಾ ಚನ್ನಾಗಾಯ್ತು ಅಂದ್ರೆ.... ಇಲ್ಲೆಲ್ಲ ಎಲ್ಲರೂ ಅದನ್ನೇ ಮಾಡ್ತಾರ.

**ಗೊಬ್ಬರ ಮಾಡದು ಕಲಿತೆವು, ಬೀಜ ಮಾಡದು ಕಲೀಬೇಕು**

ಈಗ ನಾವು ಸಾವಯವ ಗೊಬ್ಬರ ಏನೋ ಚನ್ನಾಗಿ ಮಾಡದು ಕಲಿತೆವು. ಗೊಬ್ಬರದಂತ್ಲೇ ಬೀಜ ಹ್ಯಾಂಗ್ ಮಾಡ್ಕ್ಯಂಬೇಕು ಅಂತ ನಾವು ಈಗ ಕಲಿಯಬೇಕು. ನಮಗೆ ಇದಕ್ಕ ಮಾರ್ಗದರ್ಶನ ಸಿಕ್ಕರ ನಾವು ಮುಂದುವರೀತಿವಿ.

ಅಂಗಡಿಯಿಂದ ತರೋ ಬೀಜ ಎಷ್ಟು ಚನ್ನಾಗಿ ಬರುತ್ತಲ್ಲ, ಆ ಥರವಾಗಿ ನಾವು ಮಾಡುವುದನ್ನ ಕಲೀಬೇಕು. ಅದರಲ್ಲಿ ಕ್ರಾಸ್ಸಿಂಗ್ ಹ್ಯಾಂಗ್ ಮಾಡಿದ್ದಾರು ಆ ಥರ ನಾವು ಮಾಡಬೇಕು. ಜವಾರಿನಲ್ಲೆ ನಾವು ಒಳ್ಳೆ ಬೆಳೆ ಬೆಳೆದು ತೋರಿಸಬೇಕು ಅಂಬದು ನಮ್ಮ ಚಲ. ಈ ಹೈಬ್ರಿಡ್ ಬೀಜ, ನಾನಾ ಥರದ ಬೀಜ ಕೊಡ್ತಾರ. ನಾನಾ ಥರದ ಗೊಬ್ಬರ ಹೊಡದು ಈವಾಗ ಅದು ಚನ್ನಾಗಿ ಬರಲ್ಲ, ಮುಂಚೆಯೆಲ್ಲ ಮಸ್ತ್ ಬರದು.

ಜವಾರಿ ಬೀಜ ಬೇರೆ ಕಡಿಯಿಂದ ತರಸಿ ಹಾಕಬೇಕು ಅಂಬದು ನಮ್ಮ ಆಸೆ. ಈಗ ನಾವು ಮಾಡುವ ಸಾವಯವ ಕೃಷಿಯಲ್ಲಿ ಅದು ಚನ್ನಾಗಿ ಬರಬಹುದು. ಅನೇಕ ಜವಾರಿ ಬೀಜಗಳನ್ನ ಬೆಳೆದು ಜಾಸ್ತಿ ಇಳುವರಿ ಬರುವಂಥದನ್ನ ಮಾಡಬೇಕು ಅಂತ ನಮ್ಮ ಆಸೆ. ಜವಾರಿ ಬೀಜಗಳನ್ನೇ ಹಿಡ್ಕಳ್ಳನು ಅಂಬದು ನಮ್ಮ ಆಸೆ. **ಕ್ರಿಮಿನಾಶಕ ಬಳಸಿದಂತ ಬೀಜಗಳನ್ನ ರಾಸಾಯನಿಕ ಹೊಲಕ್ಕೆ ಹಾಕಿ ಮಾಡುತ್ತಿದ್ದೆವು. ಈಗ ಸಾವಯವ ಕೃಷಿ ಅಳವಡಿಸಿಕೊಂಡಿರುವುದರಿಂದ ಜವಾರಿ ಬೀಜಗಳು ಚನ್ನಾಗಿ ಬರಬಹುದು.**

ನಾವು ಬೆಳೆಯೋ ಜೋಳನೇ ಯಾವ ರೀತಿ ಇಟ್ಕ್ಯಂಬೇಕು ಅನ್ನದು ನಾವು ಕಲೀಬೇಕು. ನಾವು ಇದುವರೆಗೆ ರಾಸಾಯನಿಕದಲ್ಲಿ ಹಾಕೊಂತಾ ಬಂದಿದೀವಲ್ರಿ. ಈಗ ಸಾವಯವ ಗೊಬ್ಬರದಲ್ಲಿ ಜವಾರಿ ಬೀಜಗಳು ಎಷ್ಟು ಚನ್ನಾಗಿ ಬರುತ್ತವೆ ಅಂತ ನಾವು ಈಗ ತಲಿ ಕೆಡಿಶಿಕೊಳ್ಳಬೇಕಾಗಿರುವುದು. ರಾಸಾಯನಿಕ ಗೊಬ್ಬರ ಹಾಕಿ ಒಂದು ಸೇರು ಅಕ್ಕಡಿಕಾಳು ಬಿತ್ತಿರ್ತಾರ. ಅವರದ್ದು ಈ ಬೀಜ ಹಾಕಿದ್ರೆ ಹೆಂಗ ಬರತೈತಿ, ಆ ಬೀಜ ಹಾಕಿದ್ರೆ ಹೆಂಗ ಬರತೈತಿ ಅಂತ ನಾವು ಪರೀಕ್ಷೆ ಮಾಡಿ ನೋಡಬೇಕು. ನೋಡಾಣು.

ಈ ವರ್ಷ ಇನ್ನೊಂದು ಮಾಡಬಹುದು. ನಮ್ಮ ಊರಿಗೆ ಯಾವ ಬೀಜ ಎಷ್ಟು ಅವಶ್ಯಕತೆ ಇದೆ ಅಂತ ಒಂದು ಸರ್ವೆ ತೆಗೆದು ಒಂದೊಂದು ಬೀಜವನ್ನ ಒಬ್ಬೊಬ್ಬರು ಹೆಚ್ಚಿಗೆ ಬೆಳೆದು ಇಡೀ ಊರಿಗಾಗುವಷ್ಟು ಮಾಡಿ ಕೊಳ್ಳಬೇಕು. ಈಗ ಸರಸ್ವತಿ ಸುರೇಳು ಜೋಳ ಇಡೀ ಸಂಘದ ಹೆಂಗಸರಿಗೆ ಆಗುವಷ್ಟು ಬೆಳೆಯೋದು. ಬೇರೆ ಎಲ್ಲಿಂದಲೋ ತರಕ್ಕೆ ಹೋದರೆ ಅದು ಸರಿ ಹೋಗಲ್ಲ. ಅದು ನಮ್ಮ ಊರಲ್ಲೇ ಬೆಳೀಬೇಕು. ಒಬ್ಬರು ಬೆಳೆದು ಎಲ್ಲರಿಗೂ ಸ್ವಲ್ಪ ಸ್ವಲ್ಪ ಕೊಟ್ರು ಅಂದರೆ ಮತ್ತೆ ಮುಂದಿನ ವರ್ಷ ಅವರೂ ಬೆಳೆದು ಹೆಚ್ಚಿಗೆ ಮಾಡಬೋದು. ❑

# ಕೇಂದ್ರ ಸಾಹಿತ್ಯ ಅಕಾಡೆಮಿ

ದಕ್ಷಿಣ ಪ್ರಾದೇಶಿಕ ಕಚೇರಿ, ಸೆಂಟ್ರಲ್ ಕಾಲೇಜ್ ಆವರಣ
ಡಾ. ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು-560 001

## ಹೊಸ ಕನ್ನಡ ಪ್ರಕಟಣೆಗಳು

**ಕಾದಂಬರಿಗಳು :**

- ಆ ದೀರ್ಘ ಮೌನ (ಇಂಗ್ಲಿಷ್ ಮೂಲ : ಶಶಿ ದೇಶಪಾಂಡೆ, ಅನು : ವಿಜಯ ಕಣೇಕಲ್) 120.00
- ಆರು ಅಡಿ ಭೂಮಿ (ಉರ್ದು ಮೂಲ : ಅಬ್ದುಸ್ಸಮದ್ ; ಅನು : ಪಂಚಾಕ್ಷರಿ ಹಿರೇಮಠ) 150.00
- ಅರ್ಧನಾರೀಶ್ವರ (ಹಿಂದಿ ಮೂಲ : ವಿಷ್ಣು ಪ್ರಭಾಕರ್ ; ಅನು : ಎಸ್.ಎಮ್. ರಾಮಚಂದ್ರಸ್ವಾಮಿ) 250.00
- ನೀಲಿಚಂದಿರ (ಹಿಂದಿ ಮೂಲ : ಶಿವಪ್ರಸಾದ ಸಿಂಹ ; ಅನು : ಪಿ. ಶಶಿಕಲಾ) 350.00
- ಚಿಟ್ಟಾಲಹು (ಪಂಜಾಬೀ ಮಲ : ನಾನಕ್ ಸಿಂಗ್ ; ಅನು : ಲವ್‌ಲೀನ್ ಜಾಲಿ, ವಿಜಯಲಕ್ಷ್ಮಿ ಅರಸ್) 85.00
- ಗೋಡೆಯಲ್ಲಿ ಒಂದು ಕಿಟಕಿ ಇರುತ್ತಿತ್ತು (ಹಿಂದಿ ಮೂಲ: ವಿನೋದಕುಮಾರ್ ಶುಕ್ಲ; ಅನು: ತೇಜಸ್ವಿ ಕಟ್ಟಿಮನಿ) 100.00

**ಕಥಾ ಸಂಕಲನ**

- ಸ್ವರ್ಣ ಕಮಲಗಳು (ತೆಲುಗು ಮೂಲ : ಇಲ್ಲಿಂದಲ ಸರಸ್ವತೀದೇವಿ ; ಅನು-ಪಿ. ವೇಣುಗೋಪಾಲ್) 300.00
- ಸಿ.ವಿ. ಶ್ರೀರಾಮನ್ ಕತೆಗಳು (ಮಲಯಾಳಂ; ಅನು-ಅಶೋಕ್ ಕುಮಾರ್) 300.00
- ದೇವರ ಮನೆ ಇತರ ಕತೆಗಳು (ಒರಿಯಾ; ಅನು ಸೀತಾರಾಮಯ್ಯ ಸೋಮನಾಥ್) 125.00
- ತಂದೆಯ ಸ್ನೇಹಿತ (ತಮಿಳು; ಅಶೋಕ ಮಿತ್ರನ್; ಅನು: ಶೇಷನಾರಾಯಣ) 100.00
- ಸಮಕಾಲೀನ ಭಾರತೀಯ ಇಂಗ್ಲಿಷ್ ಸಣ್ಣ ಕಥೆಗಳು (ಸಂ: ಶಿವ್.ಕೆ. ಕುಮಾರ್; ಅನು ಮಹಾಬಲೇಶ್ವರ ಕಾಟ್ರಹಳ್ಳಿ 150.00
- ಉಲ್ಲಂಘನ (ಒರಿಯಾ; ಪ್ರತಿಭಾ ರಾಯ್; ಅನು ಸ್ನೇಹಲತಾ ರೋಹಿಡೇಕರ್) 160.00
- ಶಾಂಬ (ಬಂಗಾಳಿ : ಸಮರೇಶ ಬಸು; ಅನು: ಜಿ. ಕುಮರಪ್ಪ) 100.00
- ಹಗ್ಗ (ತಕಳಿ ಶಿವಶಂಕರಪಿಳ್ಳೈರವರ ಮಲಯಾಳ ಕೃತಿ – ಮೂರು ಭಾಗಗಳು – ಅನುವಾದ ಕೆ.ಕೆ. ನಾಯರ್ ಮತ್ತು ಅಶೋಕ್‌ಕುಮಾರ್) ಭಾಗ ಒಂದು – 325.00; ಭಾಗ ಎರಡು – 250; ಭಾಗ ಮೂರು – 250

**ಕಾವ್ಯ**

- ಕನ್ನಡ ಸಾನೆಟ್ ಸಂಗ್ರಹ (ಸಂ. ಹೆಚ್.ಎಸ್. ವೆಂಕಟೇಶಮೂರ್ತಿ) 85.00
- ಶಬ್ದ ಗರ್ಭಿತ ಆಕಾಶ (ಒರಿಯಾ ಮೂಲ : ಸೀತಾಕಾಂತ್ ಮಹಾಪಾತ್ರ; ಅನು: ಕಮಲಾ ಹೆಮ್ಮಿಗೆ) 90.00
- ಸಂಬಂಧ (ಇಂಗ್ಲಿಷ್ : ಜಯಂತ ಮಹಾಪಾತ್ರ; ಅನು: ಲಕ್ಷ್ಮೀನಾರಾಯಣಭಟ್) 50.00
- ತಮಿಳು ಕವಿತೆಗಳು (ಸಂಪಾದಕರು; ಚಂದ್ರಶೇಖರ ಕಂಬಾರ ಮತ್ತು ಓ.ಎಲ್. ನಾಗಭೂಷಣ ಸ್ವಾಮಿ) 40.00
- ಆಧುನಿಕ ಮಹಾಭಾರತ (ಗುಂಟೂರು ಶೇಷೇಂದ್ರಶರ್ಮರ ತೆಲುಗು ಆಧುನಿಕ ಮಹಾಕಾವ್ಯ; ಅನು: ಅರ್ಕಸಾಲಿ ವೃಷಭೇಂದ್ರಚಾರ್) 200.00
- ಮಲಯಾಳದ ಜಾನಪದ ಹಾಡುಗಳು (ಸಂ. ಅಯ್ಯಪ್ಪ ಪಣಿಕ್ಕರ್; ಅನು: ಸಿ. ರಾಘವನ್) 125.00

**ಇತರ**

- ಸೌಗಂಧಿಕಾ ಪರಿಣಯ (ಮುಮ್ಮಡಿ ಕೃಷ್ಣರಾಜ ಒಡೆಯರ್; ಸಂ.ಹೆಚ್.ಎಸ್. ಶ್ರೀಮತಿ) 600.00
- ತತ್ವಮಸಿ (ಮಲಯಾಳಂ ಮೂಲ: ಸುಕುಮಾರ್ ಅಳಿಕ್ಕೋಡ್, ಅನು; ವಿ. ಗೋಪಾಲಕೃಷ್ಣ) 200.00
- ಭಾರತೀಯ ಇಂಗ್ಲಿಷ್ ಸಾಹಿತ್ಯ ಚರಿತ್ರೆ (ಎಂ.ಕೆ. ನಾಯಕ್; ಅನು: ಬಸವರಾಜ ನಾಯ್ಕರ್) 200.00
- ತೆಲುಗು-ಕನ್ನಡ ನಿಘಂಟು (ಸಂ.ಪಾಣ್ಯಂ ರಾಮಶೇಷ ಶಾಸ್ತ್ರಿ) 150.00
- ಟೀಕಾ ಸ್ವಯಂವರ : ಮರಾಠಿ ವಿಮರ್ಶಾ ಕೃತಿ (ಬಾಲಚಂದ್ರ ನೇಮಾಡೆ; ಅನು: ಚಂದ್ರಕಾಂತ ಪೋಕಳೆ) 180.00
- ಪಂಡಿತ ತಾರಾನಾಥರು ಬದುಕು ಮತ್ತು ಬರಹ: ಎಂ. ಧ್ರುವನಾರಾಯಣ 75.00

**ಭಾರತೀಯ ಸಾಹಿತ್ಯ ನಿರ್ಮಾಪಕರು (ಒಂದು ಪ್ರತಿ ರೂ.25.00)**

- ವ.ರಾ. (ವ. ರಾಮಸ್ವಾಮಿ) * ನಿರಂಜನ * ಸರ್ವಜ್ಞ * ಮಹಾಕವಿ ಶ್ರೀ ಶ್ರೀ * ರಾಚಕೊಂಡ ವಿಶ್ವನಾಥಶಾಸ್ತ್ರಿ
- ಜಿ.ಪಿ. ರಾಜರತ್ನಂ * ತೀ.ನಂ. ಶ್ರೀಕಂಠಯ್ಯ * ಮಹಾಮಹೋಪಾಧ್ಯಾಯ ಗೋಪೀನಾಥ ಕವಿರಾಜ * ಅ.ನ. ಕೃಷ್ಣರಾವ್ (40.00) * ಬಸವರಾಜ ಕಟ್ಟೀಮನಿ (40.00) * ಅಲೂರು ವೆಂಕಟರಾಯರು (40.00)

'NAMMA MANASA', REGD. No. : MAG(3) NPP/399(A) / 2006-07 KA/BGS/2074/2007-09

## ಸಹೃದಯಿ ಓದುಗರಲ್ಲಿ

**ಯಾ**ವುದೇ ಚಳವಳಿ ಸ್ವಾಯತ್ತತೆಯನ್ನು ಉಳಿಸಿಕೊಂಡಾಗ ಮಾತ್ರ ಶಕ್ತಿಯುತವಾಗಲು ಸಾಧ್ಯ. ಮಾನಸ ಸ್ವಾಯತ್ತ ಪರಿಕಲ್ಪನೆಯನ್ನು ತಾನಿಡುವ ಪುಟ್ಟ ಹೆಜ್ಜೆಯಲ್ಲೂ ಜಾರಿಗೆ ತರಲು ಪ್ರಯತ್ನಿಸಿದೆ. ಇದುವರೆಗೂ ಮಾನಸದ ಸಭೆಗೆ ರವೀಂದ್ರ ಕಲಾಕ್ಷೇತ್ರದ ಸಂಸ ಬಯಲು ರಂಗಮಂದಿರದ ಮೆಟ್ಟಿಲುಗಳು ಆಸರೆಯಾಗಿದ್ದವು. ಮಾನಸಕ್ಕೆ ತನ್ನದೇ ಆದ ಒಂದು ಕಛೇರಿ ಮಾಡಬೇಕೆಂಬ ಕನಸು ಈಗ ನನಸಾಗಿದೆ. ಈ ಕೆಳಗಿನ ವಿಳಾಸದಲ್ಲಿ ಮಾನಸಕ್ಕೆ ಒಂದು ಪುಟ್ಟ ಮನೆಯನ್ನು ಬಾಡಿಗೆಗೆ ತೆಗೆದುಕೊಂಡಿದ್ದೇವೆ. ಬಾಡಿಗೆ 1600/-. ಇದು ನಮಗೆ ಹೊರೆಯಾದರೂ, ಮಾನಸ ಸದಸ್ಯರಿಂದ ಸಂಗ್ರಹಿಸುತ್ತಿದ್ದೇವೆ. ಸಹೃದಯರು ಬಾಡಿಗೆ ಹಣವನ್ನು ಕೊಡುಗೆಯಾಗಿ ನೀಡುವುದರ ಮೂಲಕ ನಮ್ಮ ಈ ಪ್ರಯತ್ನಕ್ಕೆ ನೆರವು ನೀಡಬೇಕೆಂದು ಕೋರುತ್ತೇವೆ. ಕೊಡುಗೆ ನೀಡಿದವರ ಹೆಸರುಗಳನ್ನು ಮಾನಸದಲ್ಲಿ ಪ್ರಕಟಿಸಲಾಗುವುದು.

***ನೀವು ಮಾನಸಕ್ಕೆ ಹೀಗೆ ಸಹಕರಿಸಬಹುದು :***

- ಪತ್ರಿಕೆಗೆ ಚಂದಾದಾರರಾಗುವುದರ ಮೂಲಕ
- ಮಾನಸ ವೇದಿಕೆಗೆ ಸದಸ್ಯರಾಗುವುದರ ಮೂಲಕ
- ಕವನ, ಲೇಖನ, ವರದಿ, ಮುಂತಾದವುಗಳನ್ನು ಕಳಿಸಿಕೊಡುವುದರ ಮೂಲಕ
- ಪತ್ರಿಕೆಯನ್ನು ಪ್ರಾಯೋಜಿಸುವುದರ ಮೂಲಕ

*ಸಂಪಾದಕ ಮಂಡಳಿ*

*Posted on 9th of every month*
*at Chamarajpet Post Office*

Registered
Magazine

*ವಿಳಾಸ :*

**ನಮ್ಮ ಮಾನಸ**
34/1, 2ನೇ ಕ್ರಾಸ್, ಆಜಾದ್ ನಗರ,
ಚಾಮರಾಜಪೇಟೆ, ಬೆಂಗಳೂರು – 560 018